# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಡಿಸೆಂಬರ್ 12, 2021

ಸಂಪುಟ : 48 ಸಂಚಿಕೆ : 211 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com


## ಸೆರೊಪಾಸಿಟಿವ್ ಹೆಚ್ಚಳದಿಂದಾಗಿ ಓಮಿಕ್ರಾನ್ ಪರಿಣಾಮ ಕಡಿಮೆ

ಹೈದರಾಬಾದ್, ಡಿ. 11 – ದೇಶದಲ್ಲಿ ಸೆರೊಪಾಸಿಟಿವ್ ದರ ಹೆಚ್ಚಾಗಿರುವುದರಿಂದ ಓಮಿಕ್ರಾನ್ ರೂಪಾಂತರಿ ಭಾರತದಲ್ಲಿ ಹೆಚ್ಚು ಪರಿಣಾಮ ಬೀರದೇ ಇರಬಹುದು. ಇದರ ಜೊತೆಗೆ ಲಸಿಕೆ ಹೆಚ್ಚಿಸುವ ಜೊತೆಗೆ ಸೂಕ್ತ ವರ್ತನೆ ಹೊಂದಬೇಕಿದೆ ಎಂದು ಪರಿಣಿತರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

**ಕೊರೊನಾ ಸೋಂಕಿಗೆ ಒಳಗಾದವರು ಹಾಗೂ ಲಸಿಕೆ ಪಡೆದವರಲ್ಲಿ ಆಂಟಿಬಾಡಿಗಳು ಕಂಡು ಬರುವ ಪ್ರಮಾಣವೇ ಸೆರೊಪಾಸಿಟಿವಿಟಿ**

ಭಾರತದಲ್ಲಿ ಸೆರೊ ಪಾಸಿಟಿವ್ ದರ ಶೇ.70 ರಿಂದ 80ರಷ್ಟಿದೆ. ನಗರಗಳಲ್ಲಿ ಈ ಪ್ರಮಾಣ ಶೇ.90ರಷ್ಟಿದೆ ಎಂದು ಸಿ.ಎಸ್.ಐ.ಆರ್. - ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಬಯಾಲಜಿ (ಸಿ.ಸಿ.ಎಂ.ಬಿ.) ಮಾಜಿ ನಿರ್ದೇಶಕ ರಾಕೇಶ್ ಮಿಶ್ರ ಹೇಳಿದ್ದಾರೆ.


ಕೊರೊನಾ ಸೋಂಕಿಗೆ ಒಳಗಾದವರು ಹಾಗೂ ಲಸಿಕೆ ಪಡೆದವರಲ್ಲಿ ಆಂಟಿಬಾಡಿಗಳು ಕಂಡು ಬರುವ ಪ್ರಮಾಣವನ್ನು ಸೆರೊಪಾಸಿಟಿವಿಟಿ ಎಂದು ಗುರುತಿಸಲಾಗುತ್ತದೆ. ದೇಶದಲ್ಲಿ ಮಕ್ಕಳಿಗೆ ಲಸಿಕೆ ನೀಡುತ್ತಿಲ್ಲ. ಆದರೂ, ಇದುವರೆಗೂ ನಡೆಸಲಾದ ಸಮೀಕ್ಷೆಗಳಲ್ಲಿ ಮಕ್ಕಳಲ್ಲಿ ಸೆರೊಪಾಸಿಟಿವ್ ದರ ಬಹುತೇಕ ಹಿರಿಯರಷ್ಟೇ ಇರುವುದು ಕಂಡು ಬಂದಿದೆ.

ರಕ್ಷಣೆ ಲಭ್ಯವಿರುವುದರಿಂದ ಓಮಿಕ್ರಾನ್ ಸೋಂಕು ಬಂದರೂ ಅದರ ಲಕ್ಷಣಗಳು ಬಹುತೇಕ ಸೌಮ್ಯವಾಗಿರುತ್ತವೆ, ಇಲ್ಲವೇ ಬಹಳ ಬಾರಿ ಲಕ್ಷಣ ರಹಿತವಾಗಿರುತ್ತದೆ ಎಂದು ಮಿಶ್ರ ಹೇಳಿದ್ದಾರೆ. ಪ್ರಸಕ್ತ (2ನೇ ಪುಟಕ್ಕೆ)

# ಕೊರೊನಾ ಹತ್ತಿಕ್ಕಲು ಕೇಂದ್ರ ಸೂಚನೆ

## ಜನಜಂಗುಳಿ ನಿಯಂತ್ರಣ ಸೇರಿದಂತೆ ರಾಜ್ಯ ಸರ್ಕಾರದಿಂದ ಹಲವು ಕ್ರಮ ಸಾಧ್ಯತೆ

ಬೆಂಗಳೂರು, ಡಿ. 11 - ರಾಷ್ಟ್ರದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸುವುದೂ ಸೇರಿದಂತೆ, ಜನಜಂಗುಳಿಯನ್ನು ನಿರ್ಬಂಧಿಸಿ ಎಂದು ರಾಜ್ಯಕ್ಕೆ ಕೇಂದ್ರ ಸರ್ಕಾರ ಸೂಚಿಸಿದೆ.



ಕಳೆದ ಎರಡು ವಾರಗಳಲ್ಲಿ ಸೋಂಕಿನ ಪ್ರಮಾಣ ಹೆಚ್ಚಳವಾಗುತ್ತಿರುವುದನ್ನು ಗಮನಿಸಿ ರುವ ಕೇಂದ್ರ ಸರ್ಕಾರ ಇದನ್ನು ನಿಯಂತ್ರಿಸಲು ಕೆಲವು ಸಲಹೆ, ಸೂಚನೆಗಳನ್ನು ನೀಡಿದೆ.

ಕೇಂದ್ರ ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ಸರ್ಕಾರಕ್ಕೆ ಇಂದು ಪತ್ರ ಬರೆದು, ಸಾಂಕ್ರಾಮಿಕ ರೋಗ ಉಲ್ಬಣಗೊಳ್ಳು ತ್ತಿರುವ ಮಾಹಿತಿಯನ್ನು ನೀಡಿದ್ದಾರೆ.

ಕೊರೊನಾಗೆ ಸಂಬಂಧಿಸಿದಂತೆ ಕೇಂದ್ರದ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಪಾಲಿಸ ಬೇಕು. ಎಲ್ಲರಿಗೂ ಎರಡು ಬಾರಿ ಲಸಿಕೆ ನೀಡಲು ಕ್ರಮ ಜರುಗಿಸಬೇಕು. ಇದಲ್ಲದೆ, ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಜನಜಂಗುಳಿ ಸೇರುತ್ತದೆ. ಇದನ್ನು ನಿಯಂತ್ರಿಸಲು ರಾತ್ರಿ ಕರ್ಫ್ಯೂ ರಾಜ್ಯಾದ್ಯಂತ ಜಾರಿಗೊಳಿಸಿ. ಸಭೆ, ಸಮಾರಂಭ, ಅಂತ್ಯ ಸಂಸ್ಕಾರ, ಮದುವೆ ಸಮಾರಂಭಗಳಲ್ಲಿ ಜನ ಜಂಗುಳಿಯಾಗದಂತೆ ನಿಯಂತ್ರಿಸಬೇಕು.

ಈ ಸಂಬಂಧ ಹೊಸ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸಿ, ಅದನ್ನು ಪಾಲನೆ ಮಾಡಬೇಕೆಂದು ತಿಳಿಸಿದ್ದಾರೆ. ಡಿಸೆಂಬರ್ ಅಂತ್ಯ ಹಾಗೂ ಜನವರಿಯಲ್ಲಿ 3ನೇ ಅಲೆಗೆ ಸಂಬಂಧಿಸಿದಂತೆ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಕಾಲಾನುಕಾಲಕ್ಕೆ ತಜ್ಞರ ಸಲಹೆ ಪಡೆದು, ಕೋವಿಡ್ ನಿಯಂತ್ರಿಸಲು ಕ್ರಮ ಕೈಗೊಳ್ಳಿ.

ಸಂಭಾವ್ಯ 3ನೇ ಅಲೆ ಗಮನದಲ್ಲಿಟ್ಟು ಕೊಂಡು ಔಷಧಿಗಳನ್ನು ಸಂಗ್ರಹಿಸಿ, ಆಸ್ಪತ್ರೆ (6ನೇ ಪುಟಕ್ಕೆ)

## ದೇಶದ 8 ಜಿಲ್ಲೆಗಳಲ್ಲಿ ಪಾಸಿಟಿವ್ ದರ ಶೇ.10ಕ್ಕೂ ಹೆಚ್ಚು

ನವದೆಹಲಿ, ಡಿ. 11 – ದೇಶದ ಮೂರು ರಾಜ್ಯಗಳ ಎಂಟು ಜಿಲ್ಲೆಗಳಲ್ಲಿ ಕೊರೊನಾ ಪಾಸಿಟಿವ್ ದರ ಶೇ.10ಕ್ಕೂ ಹೆಚ್ಚಾಗಿದೆ ಎಂದು ಹೇಳಿರುವ ಕೇಂದ್ರ ಸರ್ಕಾರ, ಈ ರಾಜ್ಯಗಳು ಕಟ್ಟೆಚ್ಚರ ವಹಿಸಿ, ಸೋಂಕು ಹರಡುವುದನ್ನು ತಡೆಯುವಂತೆ ತಿಳಿಸಿದೆ.

ಕೇರಳ, ಮಿಜೋರಾಂ, ಅರುಣಾಚಲ ಪ್ರದೇಶ, ಪುದುಚೆರಿ, ಮಣಿಪುರ, ಪಶ್ಚಿಮ ಬಂಗಾಳ ಹಾಗೂ ನಾಗಾಲ್ಯಾಂಡ್‌ನ 19 ಜಿಲ್ಲೆಗಳಲ್ಲಿ ಪಾಸಿಟಿವ್ ದರ ಕಳೆದ ಎರಡು ವಾರಗಳಲ್ಲಿ ಶೇ. ಐದರಿಂದ 10ರವರೆಗೆ ಇರುವ ಬಗ್ಗೆಯೂ ಕೇಂದ್ರ ಸರ್ಕಾರ ಗಮನ ಸೆಳೆದಿದೆ.

ಮಿಜೋರಾಂ, ಕೇರಳ ಹಾಗೂ ಸಿಕ್ಕಿಂಗಳ ಎಂಟು ಜಿಲ್ಲೆಗಳಲ್ಲಿ ಕಳೆದ ಎರಡು ವಾರಗಳಲ್ಲಿ ಪಾಸಿಟಿವ್ ದರ (6ನೇ ಪುಟಕ್ಕೆ)

## ಸಕ್ರಿಯ ಸೋಂಕಿತರ ಸಂಖ್ಯೆ 559 ದಿನಗಳಲ್ಲೇ ಕಡಿಮೆ

ನವದೆಹಲಿ, ಡಿ. 11 – ದೇಶದಲ್ಲಿ ಸೋಮವಾರ 7,992 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 559 ದಿನಗಳಲ್ಲೇ ಅತಿ ಕಡಿಮೆ ಹಂತಕ್ಕೆ ತಲುಪಿದೆ. ದೇಶದಲ್ಲಿ ಓಮಿಕ್ರಾನ್ ಕಳವಳ ಇರುವ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ದೇಶದಲ್ಲೀಗ 93,277 ಸಕ್ರಿಯ ಸೋಂಕಿತರಿದ್ದು, ಇದು 559 ದಿನಗಳಲ್ಲಿ ಅತಿ ಕಡಿಮೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಂಗಳವಾರ ಕೊರೊನಾದಿಂದ 393 ಜನ ಸಾವನ್ನಪ್ಪಿದ್ದಾರೆ. ಕಳೆದ 44 ದಿನಗಳಿಂದ ಪ್ರತಿದಿನ ಕಂಡು ಬರುವ ಸೋಂಕಿತರ ಸಂಖ್ಯೆ 15 ಸಾವಿರಕ್ಕಿಂತ ಕಡಿಮೆ ಇದೆ.

## ಮತಾಂತರದಿಂದ ಬಿಟ್ ಕಾಯಿನ್‌ವರೆಗೆ ಹಲವು ಅಸ್ತ್ರಗಳೊಂದಿಗೆ ಪ್ರತಿಪಕ್ಷಗಳು

ಬೆಂಗಳೂರು, ಡಿ. 11 - ಬೆಳಗಾವಿಯ ಸುವರ್ಣ ಸೌಧದಲ್ಲಿ ಸೋಮವಾರದಿಂದ ಆರಂಭಗೊಳ್ಳುವ ಚಳಿಗಾಲದ ಅಧಿವೇಶನ ದಲ್ಲಿ ಮತಾಂತರ ನಿಷೇಧ ಕಾಯ್ದೆ, ಬಿಟ್ ಕಾಯಿನ್, ಮಳೆಯಿಂದ ಉಂಟಾದ ಬೆಳೆ ಹಾನಿ ಪರಿಹಾರದ ಬಗ್ಗೆ ಪ್ರತಿಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಜ್ಜುಗೊಂಡಿವೆ.

ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲು ನಿರ್ಧರಿಸಿರುವ ಸರ್ಕಾರ, ಪ್ರತಿಪಕ್ಷಗಳ ಅಸ್ತ್ರಗಳನ್ನು ಎದುರಿಸಲು ಪ್ರತಿತಂತ್ರ ರೂಪಿಸಿದೆ.

ಅಧಿವೇಶನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿ ಯೂರಪ್ಪ



**ಇಂದಿನಿಂದ ಬೆಳಗಾವಿ ಚಳಿಗಾಲ ಅಧಿವೇಶನ**

ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ.

ಕಳೆದ ಎರಡು ದಿನಗಳಿಂದ ಅಧಿವೇಶನದ ಪೂರ್ವ ಸಿದ್ದತೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಟ್ಟಿಗೆ ಚರ್ಚೆ ಮಾಡಿ, ಪ್ರತಿಪಕ್ಷಗಳ ಅಸ್ತ್ರಗಳನ್ನು ಎದುರಿಸಲು ಸಿದ್ದತೆ ಮಾಡಿಕೊಂಡಿದ್ದಾರೆ.

ಮತಾಂತರ ನಿಷೇಧ ಕಾಯ್ದೆಯನ್ನು ಅಧಿವೇಶನದಲ್ಲಿ ಮಂಡಿಸಲು ಕರಡು ಪ್ರತಿ ಸಿದ್ದಪಡಿಸಿದೆ. ಮತಾಂತರ ನಿಷೇಧ ವಿಧೇಯಕದಲ್ಲಿ ಬಲವಂತದ ಮತಾಂತರವನ್ನು ಅಸಿಂಧು ಎಂದು ಘೋಷಿಸಲು ಅವಕಾಶವಿದೆ.

ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಬಲವಂತದ ಮತಾಂತರ ಪ್ರಕರಣಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ.

ಇದಲ್ಲದೆ, ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ (6ನೇ ಪುಟಕ್ಕೆ)

## ಕಾಂಗ್ರೆಸ್‌ನಿಂದ ಬೂತ್‌ನಲ್ಲಿ ಡಿಜಿಟಲ್ ಯುವಕರ ನೇಮಕ

ಬೆಂಗಳೂರು ಡಿ. 11 - ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ನಾವು ಪ್ರತಿ ಬೂತ್‌ನಲ್ಲೂ 'ಡಿಜಿಟಲ್ ಯೂತ್' ನೇಮಕ ಮಾಡಲಿದ್ದು, ಅವರು ಸದಸ್ಯತ್ವ ನೋಂದಣಿ ಮಾಡಿಸಲಿದ್ದಾರೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿಂದು ನೋಂದಣಿ ಕಾರ್ಯಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದರ ಮಹತ್ವ ಅರಿತಿರುವ ನಮ್ಮ ನಾಯಕರು ತಮ್ಮ ಬೂತ್‌ಗಳಲ್ಲೇ ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಎಲ್ಲ ನಾಯಕರು, ವಿವಿಧ ಘಟಕಗಳ ಮುಖಂಡರು ಬ್ಲಾಕ್, ಜಿಲ್ಲಾ ಕಾಂಗ್ರೆಸ್ ನಾಯಕರು ಈ (2ನೇ ಪುಟಕ್ಕೆ)

## ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ತಿಂಗಳಿಗೆ 5 ಸಾವಿರ ರೂ. : ತೃಣಮೂಲ ಕಾಂಗ್ರೆಸ್

ಪಣಜಿ, ಡಿ. 11 – ಗೋವಾದಲ್ಲಿ ಅಧಿಕಾರಕ್ಕೆ ಬಂದರೆ ರಾಜ್ಯದ ಮಹಿಳೆಯರಿಗೆ ಪ್ರತಿ ತಿಂಗಳಿಗೆ 5,000 ರೂ. ನೀಡುವುದಾಗಿ ತೃಣಮೂಲ ಕಾಂಗ್ರೆಸ್ ಹೇಳಿದೆ.

ವಿಧಾನಸಭಾ ಚುನಾವಣೆಗಳು ಹತ್ತಿರ ಬರುತ್ತಿರುವಂತೆಯೇ ಮಹಿಳೆಯರಿಗೆ ಹಣ ನೀಡುವ ಭರವಸೆಗಳು ಹೆಚ್ಚಾಗುತ್ತಿವೆ. ಈ ಹಿಂದೆ ಆಮ್ ಆದ್ಮಿ ಪಾರ್ಟಿ, ಮಹಿಳೆಯರಿಗೆ ಗೃಹ ಆಧಾರ ಯೋಜನೆಯಡಿ ನೀಡಲಾಗುತ್ತಿರುವ ಹಣವನ್ನು 2,500 ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಯೋಜನೆಯಡಿ ಬರದ ಮಹಿಳೆಯರಿಗೆ 1,000 ರೂ. ನೀಡಲಾಗುವುದು ಎಂದು ಹೇಳಿತ್ತು. ಮುಂದಿನ ವರ್ಷ ಫೆಬ್ರವರಿಯಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ (2ನೇ ಪುಟಕ್ಕೆ)

## ಬಲಿಷ್ಠ ಸಮಾಜ ನಿರ್ಮಾಣಕ್ಕಾಗಿ ನೂತನ ಶಿಕ್ಷಣ ನೀತಿ ಅಗತ್ಯ

### ದಾವಣಗೆರೆ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಗಾಯತ್ರಿ ದೇವರಾಜ್ ಅಭಿಮತ

ದಾವಣಗೆರೆ, ಡಿ.11- ಬಲಿಷ್ಠ ಸಮಾಜ ನಿರ್ಮಾಣ ಹಾಗೂ ನಿರ್ವಹಣೆಗಾಗಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಸಮರ್ಪಕ ಅನುಷ್ಠಾನದ ಅಗತ್ಯತೆ ಇದೆ ಎಂದು ದಾವಣಗೆರೆ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಗಾಯತ್ರಿ ದೇವರಾಜ್ ಪ್ರತಿಪಾದಿಸಿದರು.

ದಾವಣಗೆರೆ ಜಿಲ್ಲಾ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ನಗರದ ರಾಷ್ಟ್ರೋತ್ಥಾನ ಶಾಲೆಯಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020 ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.



ಸಿಲೆಬಸ್ ಬದಲಾದಂತೆ ಶಿಕ್ಷಕರಿಗೆ ಹೊಸದನ್ನು ಓದುವ ಅವಕಾಶ ಒದಗಿದಂತಾಗುತ್ತದೆ. ಬೆಳೆಯುತ್ತಿರುವ ತಂತ್ರಜ್ಞಾನ, ಹೆಚ್ಚುತ್ತಿರುವ ಸ್ಪರ್ಧೆಗಳಿಗೆ ಅನುಗುಣವಾಗಿ ಮಕ್ಕಳನ್ನು ರೂಪಿಸಬೇಕಾಗಿದೆ. ಅದಕ್ಕಾಗಿ ಶಿಕ್ಷಕರು ಅಪ್‌ಡೇಟ್ ಆಗುವ ಅಗತ್ಯವಿದೆ ಎಂದು ಹೇಳಿದರು.

34 ವರ್ಷಗಳ ನಂತರ ಶಿಕ್ಷಣ ನೀತಿ ಬದಲಾಗುತ್ತಿದೆ. ಈ ಹಿಂದೆ ಇದ್ದ ಶಿಕ್ಷಣ ವ್ಯವಸ್ಥೆ ಉದ್ಯೋಗಕ್ಕಾಗಿ ಓದು ಎಂಬಂತಿತ್ತು. ಆದರೆ ನೂತನ ನೀತಿಯಲ್ಲಿ ವಿದ್ಯಾರ್ಥಿ ತನಗಿಷ್ಟದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಓದುವ ಅವಕಾಶ ಕಲ್ಪಿಸಲಾಗಿದೆ. ಇದು ವಿದ್ಯಾರ್ಥಿಯ ಸಮಗ್ರ ಬೆಳವಣಿಗೆಗೆ ಪೂರಕವಾಗಿದೆ ಎಂದು ಹೇಳಿದರು.

ಮಕ್ಕಳ ಭಾವನೆಗಳನ್ನು ಅರ್ಥ ಮಾಡಿಕೊಂಡು, ಮಕ್ಕಳಜೊತೆ ಮಕ್ಕಳಾಗಿ ಭವಿಷ್ಯದ ಬುನಾದಿಯನ್ನು ಕಟ್ಟಿಕೊಡುವ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಬರಬೇಕು ಎಂದು ಗಾಯತ್ರಿ ದೇವರಾಜ್ ಇದೇ ವೇಳೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತಹಶೀಲ್ದಾರ್ ಗಿರೀಶ್, ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವಂತೆ ಶಿಕ್ಷಕರು ಹಾಗೂ ಪೋಷಕರಿಗೆ ಸಲಹೆ (2ನೇ ಪುಟಕ್ಕೆ)


**ಗ್ಯಾಸ್ಟ್ರೋ ಎಂಟ್ರಾಲಜಿ ಮತ್ತು ಲಿವರ್‌ಗೆ ಸಂಬಂಧಿಸಿದ ರೋಗಗಳಿಗೆ**

ಹಿರಿಯ ಹಾಗೂ ನುರಿತ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಮತ್ತು ಹೆಪಟಾಲಜಿಸ್ಟ್ ತಜ್ಞರಾದ

**ಡಾ|| ನಿಖಿಲ್ ಬೊಂದಾಡೆ**

MBBS, MD - General Medicine, DM - Gastroenterology
Post Doctoral Fellowship in Therapeutic Endoscopy (BIDS), Mumbai
6 years Experience in Narayana Health, Sparsh, SSNMC, Bangalore.

ಎಲ್ಲಾ ರೀತಿಯ ಗ್ಯಾಸ್ಟ್ರೋ ಮತ್ತು ಲಿವರ್‌ಗೆ ಸಂಬಂಧಿಸಿದ ಕಾಯಿಲೆಗಳ ಪರಿಣಿತರು

ಮೊಬೈಲ್ : 63619 89939

ಇವರ ಸೇವೆ ಲಭ್ಯ.



ಸೌಲಭ್ಯಗಳು :
- ಡಯಾಗ್ನೋಸ್ಟಿಕ್ ಮತ್ತು ಥೆರೋಪ್ಯೂಟಿಕ್ ಎಂಡೋಸ್ಕೋಪಿ
- ಇ.ಆರ್.ಸಿ.ಪಿ.
- ಫೈಬ್ರೋ ಸ್ಕ್ಯಾನ್

ಚಿಕಿತ್ಸೆ ಸಿಗುವ ಕ್ಲಿನಿಕ್‌ಗಳು :

**ತೇಜಸ್ ಗ್ಯಾಸ್ಟ್ರೋ ಸೆಂಟರ್**
5ನೇ ಮೇನ್, 3ನೇ ಕ್ರಾಸ್, ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ – 577 004.

**ರವಿ ನರ್ಸಿಂಗ್ ಹೋಂ**
ಮಹಾವೀರ ಜೈನ್ ರೋಡ್, ದಾವಣಗೆರೆ – 577 001.

**ಗುರುನಾಥ ಹಾಸ್ಪಿಟಲ್**
ಕೆ.ಆರ್. ರೋಡ್, ದಾವಣಗೆರೆ – 577 001.



**ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ಕಾರ್ತಿಕ ಮಹೋತ್ಸವದ 14ನೇ ವರ್ಷದ ಸಹಸ್ರ ದೀಪೋತ್ಸವ ಕಾರ್ಯಕ್ರಮದ ಆಹ್ವಾನ ಪತ್ರಿಕೆ**

ದಿನಾಂಕ : 13/12/2021 ನೇ ಸೋಮವಾರ ಸಂಜೆ 6 ಗಂಟೆಗೆ

ಸ್ಥಳ : ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಆವರಣ, ತರಳಬಾಳು ವೃತ್ತ, ದಾವಣಗೆರೆ.

ದಿವ್ಯ ಸಾನ್ನಿಧ್ಯ:
ಪರಮಪೂಜ್ಯ ಶ್ರೀ ತರಳಬಾಳು ಜಗದ್ಗುರು
ಶ್ರೀ ಶ್ರೀ ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಪಟ್ಟಾಧ್ಯಕ್ಷರು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ

ಅಧ್ಯಕ್ಷತೆ: ಶ್ರೀ ರಾಮಗೊಂಡನಹಳ್ಳಿ ಜಯ್ಯಣ್ಣನವರು,
ವರ್ತಕರು, ಅಧ್ಯಕ್ಷರು ಶ್ರೀ ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ, ದಾವಣಗೆರೆ.

ಗೌರವ ಉಪಸ್ಥಿತಿ: ಶ್ರೀ ಮಾಗನೂರು ಸಂಗಮೇಶ ಗೌಡ್ರು,
ಅಧ್ಯಕ್ಷರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ

ಶ್ರೀ ಬಿ. ವಾಮದೇವಪ್ಪನವರು,
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.

ಸರ್ವ ಭಕ್ತಾದಿಗಳಿಗೆ ಆತ್ಮೀಯ ಸ್ವಾಗತ

ಭಕ್ತಿ ಪ್ರಧಾನ ಸುಗಮ ಸಂಗೀತ ಕಾರ್ಯಕ್ರಮ : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹರೋನಹಳ್ಳಿ ಸ್ವಾಮಿ ಮತ್ತು ತಂಡದವರು, ಚಿಂತನ ಕಲಾವೃಂದ ಭದ್ರಾವತಿ
ಶ್ರೀಮತಿ ರುದ್ರಾಕ್ಷಿಬಾಯಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಸಂಗಡಿಗರು ಬೆಳಕು ಜಾನಪದ ಕಲಾ ತಂಡ ದಾವಣಗೆರೆ
ಪ್ರಸಾದ ವ್ಯವಸ್ಥೆ : ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಮತ್ತು ಭಕ್ತಾದಿಗಳು

ಸೋಮವಾರ ಬೆಳಿಗ್ಗೆ 6.00 ಗಂಟೆಗೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ರುದ್ರಾಭಿಷೇಕ ನೆರವೇರುತ್ತದೆ.

ವಿಶೇಷ ಸೂಚನೆ: ಕೋವಿಡ್-19 ಇರುವುದರಿಂದ ಭಕ್ತರು ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕಾಗಿ ವಿನಂತಿ.

ಇಂದ : ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು.



|| ಶ್ರೀ ವೀರಭದ್ರೇಶ್ವರ ಪ್ರಸನ್ನ || || ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

**ವಿವಾಹ ಮಹೋತ್ಸವ ಆಮಂತ್ರಣ**

ಶ್ರೀ ಪೂರ್ಣಿಮಾ, ಶ್ರೀ ಎಲ್. ಬಸವರಾಜ್, ವಕೀಲರು (ನಗರಸಭಾ ಮಾಜಿ ಸದಸ್ಯರು ಹಾಗೂ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರು, ದಾವಣಗೆರೆ)
(ದಿ|| ಲಿಂಗದಹಳ್ಳಿ (ರೋಣದ) ಶ್ರೀ ವೀರಪ್ಪನವರ ಪುತ್ರ)
ಇವರು ಮಾಡುವ ವಿಜ್ಞಾಪನೆಗಳು.

ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ 1943ನೆಯ ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಮಾರ್ಗಶಿರ ಮಾಸ ಶುಕ್ಲಪಕ್ಷ ದಶಮಿ ತಿಥಿ ದಿನಾಂಕ : 13.12.2021ನೇ ಸೋಮವಾರ ಬೆಳಗ್ಗೆ : 10 ರಿಂದ 10.56ಕ್ಕೆ ಸಲ್ಲುವ ಮಕರ ಲಗ್ನದ ಶುಭ ಮೂಹರ್ತದಲ್ಲಿ ನಮ್ಮ ತೃತೀಯ ಪುತ್ರ

ಶ್ರೀ ಪೂರ್ಣಿಮಾ, ಶ್ರೀ ಎಲ್. ಬಸವರಾಜ್ ಇವರ ತೃತೀಯ ಪುತ್ರ
**ಚಿ|| ರಾ|| ಎಲ್.ಬಿ. ವಿಕ್ರಾಂತ್** B.E.

(ಶ್ರೀಮತಿ ಭಾಗ್ಯ ಶ್ರೀ ಮಹಾಂತೇಶ್ ಮೆಟಗುಡ್, ಬೈಲಹೊಂಗಲ ಇವರ ಜೇಷ್ಠ ಪುತ್ರಿ)
**ಚಿ|| ಕುಂ|| ಸೌ|| ಸೌಮ್ಯ ಮೆಟಗುಡ್** B.E.

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ಈ ಶುಭ ವಿವಾಹ ಸಮಾರಂಭಕ್ಕೆ ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ವಧು-ವರರಿಗೆ ಆಶೀರ್ವದಿಸಿ, ನಮ್ಮ ಮನಸ್ಸಂತೋಷಪಡಿಸಬೇಕಾಗಿ ಕೋರುವ.

ಆರತಕ್ಷತೆ: ದಿನಾಂಕ 12.12.2021ನೇ ಭಾನುವಾರ ಸಂಜೆ: 8 ರಿಂದ

ವಿವಾಹ :
13.12.2021ನೇ ಸೋಮವಾರ ಬೆಳಿಗ್ಗೆ 10 ರಿಂದ 10.56ರವರೆಗೆ

ಅಕ್ಷತಾರೋಹಣ
ಮಧ್ಯಾಹ್ನ 12.30ಗಂಟೆಗೆ

ವಿವಾಹ ಸ್ಥಳ :
ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ
ಗುಂಡಿ ಸರ್ಕಲ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-577004

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಎಲ್.ಕೆ. ಮುತ್ತಮ್ಮ ಮತ್ತು ಕುಟುಂಬದವರು
ಶ್ರೀಮತಿ ಪೂರ್ಣಿಮಾ, ಶ್ರೀ ಎಲ್. ಬಸವರಾಜ್ ಬಿ.ಕಾಂ., ಎಲ್ಎಲ್.ಬಿ
ಶ್ರೀ ಎಲ್.ಬಿ. ವಿಶ್ವನಾಥ್ ಬಿ.ಇ., ಎಂ.ಬಿ.ಎ. ಶ್ರೀಮತಿ ಅನುಶ್ರೀ ವಿಶ್ವನಾಥ್, ಬಿ.ಇ.
ಶ್ರೀ ಎಲ್.ಬಿ ವಿಜೇತ್, ಬಿ.ಇ. ಎಂ.ಬಿ.ಎ ಶ್ರೀಮತಿ ಸ್ವಾತಿ ವಿಜೇತ್, ಎಂ.ಟೆಕ್
ಹಾಗೂ ಪುಟಾಣಿಗಳಾದ : ಎಲ್.ವಿ. ಸನ್ನಿಧಿ, ಎಲ್.ವಿ. ಸಮೃದ್ಧಿ, ಎಲ್.ವಿ. ಪೂರ್ವಿಕ.

ತಮ್ಮ ಸುಖಾಗಮನ ಬಯಸುವವರು: ಬಂಧುಗಳು ಹಾಗೂ ಮಿತ್ರರು

ಇಂದ : ಶ್ರೀ ಎಲ್. ಬಸವರಾಜ್, ವಕೀಲರು
ಮಾಜಿ ನಗರಸಭಾ ಸದಸ್ಯರು ಹಾಗೂ ಬಿ.ಜೆ.ಪಿ. ಮಾಜಿ ಜಿಲ್ಲಾಧ್ಯಕ್ಷರು, ದಾವಣಗೆರೆ
ಪೂರ್ಣಿಮಾ ಎಂಟರ್‌ಪ್ರೈಸಸ್
'ಅನುಸೂಯ ನಿಲಯ' # 2603/7, 1ನೇ ಅಡ್ಡ ರಸ್ತೆ, ಮುದ್ದಳ್ಳಿ ತೋಟ ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ-577004 ಫೋ: 08192-224834 ಮೊ: 99865 44132

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಪ್ರಗತಿಯಲ್ಲಿ ಶ್ರೀ ಹರಿಹರೇಶ್ವರ ಅರ್ಬನ್ ಬ್ಯಾಂಕ್

## ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಜಿ.ಕೆ. ಮಲ್ಲಿಕಾರ್ಜುನ ಹರ್ಷ

ಹರಿಹರ, ಡಿ.11- ಗ್ರಾಹಕರ ಉತ್ತಮ ಸಹಕಾರ ಮತ್ತು ಪ್ರೋತ್ಸಾಹದ ಫಲವಾಗಿ ಬ್ಯಾಂಕ್ 3.08 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಶ್ರೀ ಹರಿಹರೇಶ್ವರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ ಜಿ.ಕೆ. ಹೇಳಿದರು.



ನಗರದ ಹೈಸ್ಕೂಲ್ ಬಡಾವಣೆಯ ಕಾಟ್ವೆ ಭವನದಲ್ಲಿ ನಡೆದ ಬ್ಯಾಂಕಿನ 64ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಸಹಕಾರಿ ಬ್ಯಾಂಕುಗಳು ಪ್ರಗತಿ ಹೊಂದುವುದು ಕಷ್ಟಕರ. ಇಂತಹ ಸಂದರ್ಭದಲ್ಲಿ ಸದಸ್ಯರು ಜವಾಬ್ದಾರಿ ಮನಗಂಡು ಸಾಲ ಮರುಪಾವತಿಗೆ ಸ್ಪಂದಿಸುತ್ತಾ ಬಂದಿರುವ ಪರಿಣಾಮ ಬ್ಯಾಂಕ್ ಆರ್ಥಿಕ ವಹಿವಾಟು ಸಫಲತೆ ಪಡೆದಿದೆ ಎಂದರು.

ಬ್ಯಾಂಕ್ 3415 ಸದಸ್ಯರು, 61.74 ಲಕ್ಷ ವರ್ಷಾಂತ್ಯಕ್ಕೆ ಷೇರು ಬಂಡವಾಳ ಹೊಂದಿದೆ. ಬ್ಯಾಂಕಿನ ಅಪದ್ಧನ ಮರಣೋತ್ತರ ನಿಧಿ ಹಾಗೂ ಧರ್ಮದ ನಿಧಿಯಲ್ಲಿ ವೆಚ್ಚವಾಗಿ 106.32 ಲಕ್ಷ ಇದ್ದು, 607.35 ಲಕ್ಷ ರೂ.ಠೇವಣಿ ಹೊಂದಿದೆ. ಕಳೆದ ಸಾಲಿಗಿಂತ 54.50 ಲಕ್ಷ ಠೇವಣಿ ಹೆಚ್ಚಿಗೆಯಾಗಿದೆ. ನಮ್ಮ ಬ್ಯಾಂಕಿನಲ್ಲಿ ಇಟ್ಟ ಠೇವಣಿಗಳು ಡಿ.ಐ ಮತ್ತು ಸಿಜಿಸಿ ವಿಮೆಯ ನಿಯಮಕ್ಕೆ ಒಳಪಟ್ಟು ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ ಎಂದು ತಿಳಿಸಿದರು.

ದಾವಣಗೆರೆ ಜಿಲ್ಲಾ ಸಹಕಾರಿ ಬ್ಯಾಂಕ್, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಸರ್ಕಾರದ ಸ್ವಾಮ್ಯದಲ್ಲಿ 353.75 ಲಕ್ಷ ಠೇವಣಿಯಾಗಿ ತೊಡಗಿಸಿದ್ದು, ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಶೇ.5.54ರಷ್ಟು ಹೆಚ್ಚಿಗೆಯಾಗಿದೆ. ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಅವರ ಅವಶ್ಯಕತೆ ಅನುಗುಣವಾಗಿ ಸಾಲವನ್ನು ನೀಡುತ್ತಾ ಬಂದಿದ್ದು ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಆದ್ಯತಾ ವಲಯ ಹಾಗೂ ದುರ್ಬಲ ವರ್ಗದವರಿಗೆ 232.11 ಲಕ್ಷ ರೂ. ಸಾಲ ನೀಡಲಾಗಿದೆ. ಠೇವಣಿದಾರರು ಹೆಚ್ಚಿನ ಬಡ್ಡಿದರ ಹಾಗೂ ಸುರಕ್ಷತೆ ಪ್ರಯೋಜನ ಪಡೆದು, ಹೆಚ್ಚಿನ ಠೇವಣಿ ಹೂಡಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಕೆ ರವಿಚಂದ್ರ, ನಿರ್ದೇಶಕರಾದ ಬಿ.ಕೆ. ಅನ್ವರ್ ಪಾಷಾ, ವಾಸುದೇವ ಹೋವಳೆ, ಪರಶುರಾಮ್ ಅಂಬೇಕರ್, ಅಣ್ಣಪ್ಪ ಕೆ, ರಾಧಾ ಹಾಲೇಶ್, ಓಬಳಪ್ಪ ಟಿ, ಅಜ್ಜಯ್ಯ ಹೆಚ್, ವಿದ್ಯಾ ರಾಘವೇಂದ್ರ ಮೆಹರ್ವಾಡೆ, ವೀರಭದ್ರಯ್ಯ ಹೆಚ್.ಎಂ. ನಾಗೇಂದ್ರಸಾ ಕಾಟ್ವೆ, ಸೋಮನಾಥರಾವ್ ಬೊಂಗಾಳೆ, ವ್ಯವಸ್ಥಾಪಕಿ ರೇಖಾ ಮೆಹರ್ವಾಡೆ, ಸಿಬ್ಬಂದಿಗಳಾದ ಶಶಿಕಲಾ ಪರಶುರಾಮ್, ಮಂಜುನಾಥ್ ಎಸ್, ಸಿ ಪ್ರಕಾಶ್, ಸತ್ಯನಾರಾಯಣರಾವ್ ಹೆಚ್, ಪ್ರಶಾಂತ್ ಪಿ, ಶಿವಕುಮಾರ್ ಎ, ಬಿಂದು , ಪಿಗ್ಮಿ ಸಂಗ್ರಹಕಾರರು ಬಿ.ಕೆ. ಕರಿಬಸಪ್ಪ, ಗುರುಮೂರ್ತಿ ಹೆಚ್.ಎನ್, ಸೋಮೇಶ್ ಸಿ, ಸುಮಾ ಹೆಚ್.ಎಂ. ವೀಣಾ ಎಸ್, ನಾಗರಾಜ್ ಹೆಚ್. ಸೇರಿದಂತೆ, ಇತರರು ಹಾಜರಿದ್ದರು.

# ಬೂತ್‌ನಲ್ಲಿ ಡಿಜಿಟಲ್ ಯುವಕರ ನೇಮಕ

**(1ನೇ ಪುಟದಿಂದ)** ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಾವು ರಾಜ್ಯದಲ್ಲಿ ಸದಸ್ಯತ್ವ ಸಂಖ್ಯೆಗಿಂತ ಗುಣಮಟ್ಟದ ಸದಸ್ಯತ್ವದ ಬಗ್ಗೆ ಗಮನಹರಿಸಿದ್ದೇವೆ ಎಂದವರು ಹೇಳಿದ್ದಾರೆ.

ಸಿ.ಎಂ. ಇಬ್ರಾಹಿಂ ಅವರ ಭೇಟಿ ಹಾಗೂ ಸದಸ್ಯತ್ವ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಇಬ್ರಾಹಿಂ ಅವರು ಸದಸ್ಯತ್ವ ಪಡೆಯಲು ಆಗಮಿಸಿದ್ದರು. ಆದರೆ ಗುರುತಿನ ಚೀಟಿ ಇಲ್ಲದ ಕಾರಣ ತಮ್ಮ ಬೂತ್‌ನಲ್ಲೇ ಸದಸ್ಯತ್ವ ಪಡೆಯುತ್ತಾರೆ. ಜತೆಗೆ ಪಕ್ಷದ ಸಂಘಟನೆ ವಿಚಾರವಾಗಿ ಚರ್ಚೆ ಮಾಡಲು ಆಗಮಿಸಿದ್ದರು ಎಂದರು.

ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಎಷ್ಟು ಸ್ಥಾನ ಗೆಲ್ಲಲಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಯಡಿಯೂರಪ್ಪ ಅವರು ಈಗಾಗಲೇ 15 ಸೀಟು ಗೆಲ್ಲುವುದಾಗಿ ತಿಳಿಸಿದ್ದಾರೆ. ಅವರು ಗೆದ್ದು ಬಿಟ್ಟ ಸೀಟುಗಳನ್ನು ನಾವು ಗೆಲ್ಲುತ್ತೇವೆ. ಅವರಿಗೆ ಬೇಕಾದಷ್ಟು ಇಟ್ಟುಕೊಂಡು ಮಿಕ್ಕಿದ್ದು ನೀಡಲಿ. ಪಾಲಿಗೆ ಬಂದಿದ್ದು ಪಂಚಾಮೃತ ಎಂದು ಭಾವಿಸುತ್ತೇವೆ ಎಂದು ಛೇಡಿಸಿದರು.

ಮುಂದಿನ ಮುಖ್ಯಮಂತ್ರಿ ಸಂಬಂಧ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಅವರ ಹೇಳಿಕೆ ನೋಡಿಲ್ಲ. ಯಾರಿಗೆ ಏನೆಲ್ಲಾ ಆಸೆ ಇದೆಯೋ ಅದನ್ನು ಎಐಸಿಸಿ ನೋಡಿಕೊಳ್ಳುತ್ತದೆ ಎಂದರು.

ಬೆಳಗಾವಿ ಅಧಿವೇಶನದಲ್ಲಿ ಮತಾಂತರ ನಿಷೇಧ ವಿಧೇಯಕ ಮಂಡಿಸಲು ಸರ್ಕಾರ ತಯಾರಿ ನಡೆಸಿರುವ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸರ್ಕಾರ ಎರಡು ಯೋಜನೆ ರೂಪಿಸಿದೆ. ಮೊದಲನೆಯದು ಮಸೂದೆಯನ್ನು ಅಧಿಕೃತವಾಗಿ ತರುವುದು, ಮತ್ತೊಂದು ಖಾಸಗಿಯಾಗಿ ತರುವುದು. ಇದು ಕೇವಲ ಇಲ್ಲಿನ ವಿಚಾರವಲ್ಲ, ಇಡೀ ವಿಶ್ವವೇ ಗಮನಿಸುವ ವಿಚಾರ ಎಂದರು.

ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಒಂದೊಂದೇ ಸಮುದಾಯವನ್ನು ಬಿಜೆಪಿ ಗುರಿ ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಕ್ರೈಸ್ತ ಸಮುದಾಯದ ಕೊಡುಗೆ ಮರೆಯಲು ಸಾಧ್ಯವಿಲ್ಲ. ಕ್ರೈಸ್ತ ಶಿಕ್ಷಣ ಸಂಸ್ಥೆಗಳಲ್ಲಿ ಓದಿದ ಯಾವುದಾದರೂ ಒಬ್ಬ ವಿದ್ಯಾರ್ಥಿ ನಮ್ಮನ್ನು ಮತಾಂತರಕ್ಕೆ ಒತ್ತಾಯ ಮಾಡುತ್ತಿದ್ದಾರೆ ಎಂದು ಹೇಳಿರುವ ಒಂದಾದರೂ ದೂರು ದಾಖಲಾಗಿದೆಯಾ? ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಒತ್ತಾಯ ಮಾಡಿದ್ದಾರೆಯೇ ಅವರು ಮಾನವೀಯತೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ? ಎಂದರು.

ಸಿಎಂ ಬದಲಾವಣೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಮೂರು ಮುಖ್ಯಮಂತ್ರಿ ನೇಮಕ ಬಿಜೆಪಿಯ ಹಳೆ ಸಂಪ್ರದಾಯ. ಅವರ ಪಕ್ಷದ ಆಂತರಿಕ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಅವರು ಮೂವರು ಮುಖ್ಯಮಂತ್ರಿಗಳನ್ನಾದರೂ ಮಾಡಲಿ ಅಥವಾ ಆರು ಜನರನ್ನಾದರೂ ಮಾಡಲಿ. ಬಿಜೆಪಿ ಉತ್ತಮ ಸರ್ಕಾರ ನೀಡಿಲ್ಲ, ಹೀಗಾಗಿ ಜನರು ಸರ್ಕಾರವನ್ನು ಕಿತ್ತೊಗೆಯಲಿ ಎಂದರು.

## ತಿಂಗಳಿಗೆ 5 ಸಾವಿರ ರೂ. : ತೃಣಮೂಲ ಕಾಂಗ್ರೆಸ್

**(1ನೇ ಪುಟದಿಂದ)** ನಡೆಯಲಿದೆ.

ಗೃಹ ಲಕ್ಷ್ಮಿ ಯೋಜನೆಯಡಿ ಪ್ರತಿ ಗೃಹಿಣಿಗೆ 5,000 ರೂ.ಗಳನ್ನು ನೀಡಲಾಗುವುದು ಎಂದು ತೃಣಮೂಲ ಕಾಂಗ್ರೆಸ್ ನಾಯಕಿ ಮಹುವಾ ಮೊಯಿತ್ರ ಹೇಳಿದ್ದಾರೆ. ರಾಜ್ಯದ 3.5 ಲಕ್ಷ ಮನೆಗಳು ಈ ಯೋಜನೆಗೆ ಒಳಪಡಲಿವೆ. ಎಷ್ಟೇ ಆದಾಯ ಹೊಂದಿದ್ದರೂ ಸಹ, ಈ ಯೋಜನೆಯಡಿ ಹಣ ನೀಡಲಾಗುವುದು ಎಂದವರು ತಿಳಿಸಿದ್ದಾರೆ. ಪ್ರಸಕ್ತ ರಾಜ್ಯ ಬಿಜೆಪಿ ಸರ್ಕಾರ 1.5 ಲಕ್ಷ ಕುಟುಂಬಗಳಿಗೆ ತಿಂಗಳಿಗೆ 1,500 ರೂ.ಗಳನ್ನು ನೀಡುತ್ತಿದೆ.

# ಕ್ಷಮೆಯಾಚಿಸಿದ ಕೀಟಲೆ ಮಾಡಿದ್ದ ವಿದ್ಯಾರ್ಥಿಗಳು

ದಾವಣಗೆರೆ, ಡಿ.11- ಶಾಲೆಯಲ್ಲಿ ತರಗತಿಯ ವೇಳೆ ಪಾಠ ಮಾಡುತ್ತಿದ್ದ ಹಿರಿಯ ಶಿಕ್ಷಕರೋರ್ವರಿಗೆ ಅವಮಾನಿಸಿ ವಿಕೃತಿ ಮೆರೆದಿದ್ದ ವಿದ್ಯಾರ್ಥಿಗಳು ಇದೀಗ ಆ ಶಿಕ್ಷಕನ ಕಾಲಿಗೆ ಬಿದ್ದು ಕ್ಷಮೆ ಕೇಳಿರುವ ಘಟನೆ ನಡೆದಿದೆ.





ಚನ್ನಗಿರಿ ತಾಲ್ಲೂಕಿನ ನಲ್ಲೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಡಿ.3ರಂದು ಶಾಲೆಯ ತರಗತಿಯಲ್ಲಿ ಶಿಕ್ಷಕನ ತಲೆಯ ಮೇಲೆ ಕಸದ ಬುಟ್ಟಿ ಹಾಕಿ ಕೆಲ ವಿದ್ಯಾರ್ಥಿಗಳು ಕೀಟಲೆ ಮಾಡಿದ್ದರು.

ಗುರುಗಳ ಮೇಲೆ ವಿಕೃತಿ ಮೆರೆದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಆದರೂ ಶಿಕ್ಷಕ ಸಹನೆ, ತಾಳ್ಮೆಯಿಂದ ವಿದ್ಯಾರ್ಥಿಗಳ ಭವಿಷ್ಯದ ಹಿನ್ನೆಲೆ ಯಾರಿಗೂ ವಿಷಯ ತಿಳಿಸಿರಲಿಲ್ಲ. ಈ ಘಟನೆಗೆ ಗ್ರಾಮಸ್ಥರು, ಜನರು ಖಂಡಿಸಿದ್ದರು. ಈ ಸಂಬಂಧ ಚನ್ನಗಿರಿ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು.

ವಿದ್ಯಾರ್ಥಿಗಳನ್ನು ಶಾಲೆಯಿಂದ ಅಮಾನುತ್ತು ಮಾಡಬೇಕೆಂದು ಆಗ್ರಹಿಸಲಾಗಿತ್ತು. ಅಂತೆಯೇ ಕೀಟಲೆ ಮಾಡಿದ್ದ ವಿದ್ಯಾರ್ಥಿಗಳನ್ನು ಅಮಾನತ್ತು ಸಹ ಮಾಡಲಾಗಿತ್ತು.

ಇದೀಗ ಗ್ರಾಮಸ್ಥರು ಹಾಗೂ ಎಬಿವಿಪಿ ಕಾರ್ಯಕರ್ತರು ಕೀಟಲೆ ಮಾಡಿದ್ದ ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಿದ್ದು, ಆ ವಿದ್ಯಾರ್ಥಿಗಳಿಂದ ಶಿಕ್ಷಕರ ಕಾಲಿಗೆ ಬೀಳಿಸಿ ಕ್ಷಮೆ ಕೇಳಿಸಿದ್ದಾರೆ.

# ಜನ ಪ್ರೀತಿ, ಹಿರಿಯರ ಆಶೀರ್ವಾದ ಇರುವವರೆಗೆ ಜನರ ಸೇವೆ : ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್

ಹರಿಹರ, ಡಿ.11- ಕ್ಷೇತ್ರದ ಜನರು ನನಗೆ ತೋರಿಸುವ ಪ್ರೀತಿ, ವಿಶ್ವಾಸ ಮತ್ತು ಹಿರಿಯರ ಆಶೀರ್ವಾದ ಇರುವ ತನಕ ಜನರ ಸೇವೆ ಮಾಡುವುದಾಗಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೇಳಿದ್ದಾರೆ.



ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಹೆಚ್. ಎಸ್. ಶಿವಶಂಕರ್ ಅಭಿಮಾನಿಗಳ ಬಳಗದವರು ಮಾಜಿ. ಶಾಸಕ ಹೆಚ್.ಎಸ್. ಶಿವಶಂಕರ್ ಹುಟ್ಟು ಹಬ್ಬದ ನಿಮಿತ್ತವಾಗಿ ರಸಮಂಜರಿ ಕಾರ್ಯಕ್ರಮ ಆಯೋಜಿಸಿದ್ದ ತಮ್ಮ ಹುಟ್ಟು ಹಬ್ಬದ ಕೇಕ್ ಕತ್ತರಿಸಿ ಅವರು ಮಾತನಾಡುತ್ತಿದ್ದಾರೆ.

ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎಂದು ಜನರು ಮಾತನಾಡುತ್ತಿದ್ದಾರೆ. ಆದರೆ, ಈ ಕಾರ್ಯಕ್ರಮ ನನಗೆ ಹಾರೈಸುವುದಕ್ಕೆ ಮತ್ತು ನನಗೆ ನೂರು ವರ್ಷಗಳ ಕಾಲ ಚೆನ್ನಾಗಿ ಇರುವುದಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬುವ ಕಾರ್ಯಕ್ರಮ ಇದಾಗಿದ್ದರಿಂದ ನಾನು ಹೆಚ್ಚು ರಾಜಕೀಯ ವಿಚಾರಗಳನ್ನು ಮಾತನಾಡುವುದು ಸೂಕ್ತವಲ್ಲ ಅನಿಸುತ್ತದೆ. ಆದರೆ, ಕ್ಷೇತ್ರದಲ್ಲಿ ಕಳೆದ ಹಲವು ವರ್ಷಗಳಿಂದ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಆಗದೆ ಇರುವುದರಿಂದ ಜನರು ರೋಸಿ ಹೋಗಿದ್ದಾರೆ. ಅವರು ಪಡುತ್ತಿರುವ ನೋವುಗಳನ್ನು ಪರಿಹರಿಸಲು ನಾನು ಕೂಡ ಅಧಿಕಾರ ಇಲ್ಲದೆ ಇದ್ದರೂ ಸಹ ನನ್ನ ಕೈಲಾದ ಜನರಿಗೆ ಸಹಾಯವನ್ನು ಮಾಡುತ್ತಿರುವ ಪರಿಣಾಮವಾಗಿ ಜನರು ನನ್ನ ಮೇಲೆ ಅಪಾರವಾದ ಗೌರವ ಪ್ರೀತಿ ವಿಶ್ವಾಸ ತೋರಿಸುವುದಕ್ಕೆ ಕಾರಣವಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ನಗರಸಭೆ ಸದಸ್ಯರಾದ ಜಂಬಣ್ಣ ಗುತ್ತೂರು, ನಿಂಬಕ್ಕ ಚಂದಪೂರ್, ಉಷಾ ಮಂಜುನಾಥ್, ಲಕ್ಷ್ಮೀ ಮೋಹನ್, ಕವಿತಾ ಮಾರುತಿ, ಜಾವೇದ್, ಅಲ್ತಾಫ್, ದಿನೇಶ್ ಬಾಬು ಖಂಡರಾದ ಹೆಚ್.ಎಸ್. ಅರವಿಂದ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಪರಮೇಶ್ವರ ಗೌಡ್ರು, ಸುರೇಶ್ ಹಾದಿಮನಿ, ಕಳೇರ್ ಮಂಜುನಾಥ್, ನಿಡುಗಲ್ ನಾರಾಯಣ, ಬಸವರಾಜ್ ಮಲೇಬೆನ್ನೂರು, ಮಹಾದೇವಪ್ಪ ಮಲೆಬೆನ್ನೂರು, ಒಣ ರೊಟ್ಟಿ ಮಹಾಂತೇಶ್, ಶಂಕ್ರಪ್ಪ, ಆಸೀಫ್, ರಾಜು, ಲಕ್ಷ್ಮೀ ರಾಜಚಾರ್, ರಾಗಿಣಿ, ಲತಾ ಕೊಟ್ರೇಶ್, ನಾಗರಾಜ್ ಅಮರಾವತಿ ಮತ್ತಿತರರು ಹಾಜರಿದ್ದರು.

# ನೂತನ ಶಿಕ್ಷಣ ನೀತಿ ಅಗತ್ಯ

**(1ನೇ ಪುಟದಿಂದ)** ನೀಡಿದರು.

ಒಂದು ಕಡೆ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಶ್ರಮಿಸುತ್ತಿದ್ದಾರೆ. ಮತ್ತೊಂದೆಡೆ ಖಾಸಗಿ ಶಾಲೆಗಳು ಕೇಳುತ್ತಿರುವ ಡೊನೇಷನ್ ಹಾವಳಿಗೆ ಬೇಸತ್ತ ಪೋಷಕರಿಂದ ನೂರಾರು ದೂರುಗಳು ಬರುತ್ತಿವೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸಾಕಷ್ಟು ಹಣ ಕೊಟ್ಟು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುವುದಷ್ಟೇ ಮುಖ್ಯವಲ್ಲ. ಅವರಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಬೇಕು. ಸಂಸ್ಕೃತಿ, ಸಂಸ್ಕಾರದ ಪಾಠವನ್ನೂ ಹೇಳಬೇಕು ಎಂದು ಸಲಹೆ ನೀಡಿದರು.

ಹೆಚ್ಚು ಓದಿದವರು ಇಂದು ಹೆತ್ತವರನ್ನೇ ಅನಾಥರನ್ನಾಗಿ ಮಾಡಿ ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಿಂದೆ ಇದ್ದ ಜೀತಪದ್ಧತಿ ಮತ್ತೆ ಮರುಕಳಿಸಿದ ಅನುಭವವಾಗುತ್ತಿದೆ. ಆದರೆ ರೈತರ ಮಕ್ಕಳು ಹೆತ್ತವರನ್ನು ಗೌರವಿಸುವುದು, ಕೊನೆಕಾಲದಲ್ಲಿ ಆಸರೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದರಿಂದಾಗಿ ಮನೆ ಹಾಗೂ ಶಾಲೆ ಎರಡರಲ್ಲೂ ಮಕ್ಕಳಲ್ಲಿ ಸಂಸ್ಕಾರ ಕಲಿಸಬೇಕು ಎಂದು ಹೇಳಿದರು. ರಾಷ್ಟ್ರೀಯ ಶಿಕ್ಷಣ ನೀತಿಯ ಅಗತ್ಯತೆಗಳು, ಉದ್ದೇಶಗಳು ಹಾಗೂ ಶಾಲಾ ಹಂತದಲ್ಲಿ ಅಳವಿಕೆಯ ಸವಾಲುಗಳು-ಪರಿಹಾರಗಳ ಬಗ್ಗೆ ಪಾರ್ವತಿ ಭಟ್ ಮಾತನಾಡಿದರು.

ಒಕ್ಕೂಟದ ಅಧ್ಯಕ್ಷ ಉಮಾಪತಯ್ಯ, ಪ್ರಧಾನ ಕಾರ್ಯದರ್ಶಿ ರಾಮಮೂರ್ತಿ, ಕಾರ್ಯಾಧ್ಯಕ್ಷ ಲಿಂಗರಾಜ್ ಉಪಸ್ಥಿತರಿದ್ದರು. ನಿರ್ದೇಶಕ ಹೆಚ್.ಜಯಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಗಡಿ ಮಂಜುನಾಥ್ ನಿರೂಪಿಸಿದರು. ಪ್ರಸನ್ನ ಅತ್ತಿಗೆರೆ ಸ್ವಾಗತಿಸಿದರು. ಜಿ.ಅಶೋಕ್ ಪ್ರಾರ್ಥಿಸಿದರು. ಸಹನಾ ರವಿ ವಂದಿಸಿದರು.

# ಸೆರೊಪಾಸಿಟಿವ್ ಹೆಚ್ಚಳದಿಂದಾಗಿ ಓಮಿಕ್ರಾನ್ ಪರಿಣಾಮ ಕಡಿಮೆ

**(1ನೇ ಪುಟದಿಂದ)** ಅವರು ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜಿನೆಟಿಕ್ಸ್ ಹಾಗೂ ಸೊಸೈಟಿ ನಿರ್ದೇಶಕರಾಗಿದ್ದಾರೆ.

ಲಸಿಕೆ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ನೀಡಿದರೆ ಹಾಗೂ ಮಕ್ಕಳಿಗೆ ಲಸಿಕೆ ನೀಡಿದರೆ ಇನ್ನಷ್ಟು ಉತ್ತಮ ಫಲಿತಾಂಶ ದೊರೆಯಲಿದೆ ಎಂದು ಮಿಶ್ರ ಹೇಳಿದ್ದಾರೆ.

ಓಮಿಕ್ರಾನ್ ಕುರಿತು ಈಗಷ್ಟೇ ಮಾಹಿತಿ ಬರುತ್ತಿದೆಯಾದರೂ, ದೇಶದಲ್ಲಿ ಈ ರೂಪಾಂತರಿ ಹರಡಿರುವುದು ಬಹುತೇಕ ಸ್ಪಷ್ಟವಾಗಿದೆ. ಆದರೆ, ಡೆಲ್ಟಾಗೆ ಹೋಲಿಸಿದರೆ ಓಮಿಕ್ರಾನ್ ರೂಪಾಂತರಿ ಸೌಮ್ಯವಾಗಿದೆ ಎಂದವರು ತಿಳಿಸಿದ್ದಾರೆ.

ಆದರೆ, ಈ ಹಂತದಲ್ಲಿ ಎಚ್ಚರಿಕೆ ತಪ್ಪಬಾರದು. ಮಾಸ್ಕ್ ಧರಿಸುವ, ಸಾಮಾಜಿಕ ಅಂತರ ಹಾಗೂ ಲಸಿಕೆಯ ಕ್ರಮಗಳಿಗೆ ಒತ್ತು ನೀಡಬೇಕಿದೆ ಎಂದವರು ಹೇಳಿದ್ದಾರೆ.

ಓಮಿಕ್ರಾನ್ ಕಾರಣದಿಂದಾಗಿ ಮೂರನೇ ಅಲೆ ಬರುವ ಕುರಿತ ಪ್ರಶ್ನೆಗಳಿಗೆ ಉತ್ತರಿಸಿರುವ ಅವರು, ಯುರೋಪ್‌ನಲ್ಲಿ ಓಮಿಕ್ರಾನ್ ಇಲ್ಲದೆಯೇ ಅಲೆಗಳು ಬರುತ್ತಿವೆ. ಇದು ರೂಪಾಂತರಿ ಇಲ್ಲದೆಯೂ ಅಲೆ ಬರುವುದನ್ನು ತೋರಿಸುತ್ತದೆ ಎಂದಿದ್ದಾರೆ.

ಭಾರತದಲ್ಲಿ ಎರಡನೇ ಅಲೆಯಲ್ಲಿ ಸಾಕಷ್ಟು ಜನರು ಸೋಂಕಿಗೆ ಗುರಿಯಾಗಿದ್ದರು. ಹೀಗಾಗಿ ಮುಂದಿನ ಅಲೆಯಲ್ಲಿ ಜನರು ಆಸ್ಪತ್ರೆಗೆ ದಾಖಲಾಗುವ ಹಾಗೂ ಆಕ್ಸಿನ್ ಅಗತ್ಯ ಬರುವ ಪ್ರಕರಣಗಳು ಕಡಿಮೆಯಾಗುತ್ತವೆ ಎಂದವರು ಹೇಳಿದ್ದಾರೆ.

# ಮಲೇಬೆನ್ನೂರು : ಕಾಂಗ್ರೆಸ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಮಲೇಬೆನ್ನೂರು, ಡಿ.11- ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಛೇರಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸದಸ್ಯತ್ವ ಅಭಿಯಾನಕ್ಕೆ ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಚಾಲನೆ ನೀಡಿದರು.



ನಂತರ ಮಾತನಾಡಿದ ಹಾಲೇಶಪ್ಪ ಅವರು, ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಪ್ರತಿಯೊಬ್ಬರೂ ಹೆಮ್ಮೆಯಿಂದ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಮಾತನಾಡಿ, ಹರಿಹರ ತಾಲ್ಲೂಕಿನಲ್ಲಿ ಶಾಸಕ ಎಸ್. ರಾಮಪ್ಪ ಅವರ ನೇತೃತ್ವದಲ್ಲಿ 50 ಸಾವಿರ ಕಾಂಗ್ರೆಸ್ ಸದಸ್ಯತ್ವ ಮಾಡಿಸಬೇಕೆಂಬ ಗುರಿ ಹೊಂದಿದ್ದೇವೆ ಎಂದರು.

ಕಾಂಗ್ರೆಸ್ ಮುಖಂಡರಾದ ತಳಸದ ಬಸವರಾಜ್, ಕಾಂಗ್ರೆಸ್ ಓಬಿಸಿ ಅಧ್ಯಕ್ಷ ಕೆ.ಪಿ. ಗಂಗಾಧರ್, ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ದಾದಾವಲಿ, ಭೋವಿಕುಮಾರ್, ಫಕ್ರುದ್ದೀನ್ ಅಹ್ಮದ್, ಗ್ರಾ.ಪಂ. ಮಾಜಿ ಅಧ್ಯಕ್ಷ ಇಸ್ಮಾಯಿಲ್ ಸಾಬ್, ಪೂಜಾರ್ ದೇವರಾಜ್, ಪಿ. ನಾರಾಯಣಪ್ಪ, ಪಿ. ಹೆಚ್. ಶಿವಕುಮಾರ್, ಶಬ್ಬೀರ್‌ಖಾನ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.


॥ ಶ್ರೀ ರೇವಣಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ಆಂಜನೇಯ ಬಡಾವಣೆ ವಾಸಿಗಳಾದ

**ಶ್ರೀ ಡಿ.ಎನ್. ರೇವಣಸಿದ್ದಪ್ಪ,** ನಿವೃತ್ತ ಉಪ ತಹಶೀಲ್ದಾರ್

**ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.**

ದಿನಾಂಕ 04.12.2021 ನೇ ಶನಿವಾರ ರಾತ್ರಿ 10.15 ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಡಿ.ಆರ್. ಮೋಕ್ಷಾದಾಯಿಣಿ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"**ಯನ್ನು

ದಿನಾಂಕ 12.12.2021 ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ ಮೃತರ ಸ್ವಗೃಹ, 739, 'ಮೋಕ್ಷ ನಿಲಯ' 5ನೇ ಕ್ರಾಸ್, ಹೇಮಾವತಿ ಹಾಸ್ಟೆಲ್ ಹತ್ತಿರ, ಆಂಜನೇಯ ಬಡಾವಣೆ, ದಾವಣಗೆರೆ, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖಿತಪ್ತರು :**

**ಶ್ರೀ ಡಿ.ಎನ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ದಂಡಪ್ಪರ ವಂಶಸ್ಥರು ಹಾಗೂ ಬಂಧು-ಮಿತ್ರರು**

**94487 33367, 91640 35610**


# ಹರಪನಹಳ್ಳಿ ವಿಧಾನ ಪರಿಷತ್ ಚುನಾವಣೆ ಶೇ 100 ರಷ್ಟು ಮತದಾನ




ಹರಪನಹಳ್ಳಿ, ಡಿ.11- ಬಳ್ಳಾರಿ ವಿಧಾನ ಪರಿಷತ್ ಕ್ಷೇತ್ರಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ತಾಲ್ಲೂಕಿನಲ್ಲಿ ಶೇ 100 ರಷ್ಟು ಮತದಾನವಾಗಿದೆ ಎಂದು ತಹಶೀಲ್ದಾರ್ ಎಲ್.ಎಂ.ನಂದೀಶ್ ತಿಳಿಸಿದರು.

ಶುಕ್ರವಾರ ಬೆಳಗ್ಗೆ 8 ಕ್ಕೆ ಪ್ರಾರಂಭವಾದ ಮತದಾನ ಪ್ರಕ್ರಿಯೆ ಸಂಜೆ 4 ಗಂಟೆಯ ವರೆಗೂ ಪಟ್ಟಣದ ಪುರಸಭೆ ಮತಗಟ್ಟೆ ಸೇರಿದಂತೆ ತಾಲ್ಲೂಕಿನ 37 ಗ್ರಾಮ ಪಂಚಾಯ್ತಿಗಳ ಮತಗಟ್ಟೆ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ ಶಾಂತಿಯುತವಾಗಿ ನಡೆದಿದೆ ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ ವಿಧಾನ ಪರಿಷತ್‌ಗೆ ಒಟ್ಟು 684 ಮತದಾರರ ಪೈಕಿ 684 ಮತಗಳು ಚಲಾವಣೆಯಾದ ಹಿನ್ನೆಲೆಯಲ್ಲಿ ಶೇ 100 ರಷ್ಟು ಮತದಾನವಾಗಿದೆ ಎಂದರು

ಪ್ರತಿಯೊಂದು ಮತಗಟ್ಟೆ ಕೇಂದ್ರದ ಬಳಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು, ಕೋವಿಡ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮತದಾರರಿಗೆ ಸ್ಯಾನಿಟೈಸರ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಮತಗಟ್ಟೆ ಕೇಂದ್ರದಲ್ಲಿ ಮತದಾರರಿಗೆ ಕುಡಿಯುವ ನೀರು ಸೇರಿದಂತೆ ಇತರೆ ಸೌಕರ್ಯ ಕಲ್ಪಿಸಲಾಗಿತ್ತು ಎಂದು ಹೇಳಿದರು.


**ಒಂಬತ್ತನೇ ವರ್ಷದ ಪುಣ್ಯಸ್ಮರಣೆ**



**ದಿ. ಹಾಸಬಾವಿ ಜೆ. ವಿಶ್ವನಾಥ್ (ಈಶಣ್ಣ)**

*ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳಾದವು. ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,*

**ಪತ್ನಿ : ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು ಹಾಗೂ ಹಾಸಬಾವಿ ವಂಶಸ್ಥರು, ದಾವಣಗೆರೆ.**


## ಚಿತ್ತಾನಹಳ್ಳಿ ಪರಸಪ್ಪ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ ಕಾಳಮ್ಮ ದೇವಸ್ಥಾನದ ಹತ್ತಿರದ ವಾಸಿ ಎಳೆನೀರು ನಾಗಪ್ಪನವರ ಸಹೋದರ ಸಿ.ಎನ್. ಪರಸಪ್ಪ (65) ಅವರು, ದಿನಾಂಕ 11.12.2021 ರ ಶನಿವಾರ ಸಂಜೆ 7 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.12.2021 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

# ಮಾಯಕೊಂಡ : ಕಾಂಗ್ರೆಸ್ ಸದಸ್ಯತ್ವ ಅಭಿಯಾನ



ದಾವಣಗೆರೆ, ಡಿ.11- ಯು.ಪಿ.ಎ. ನೇತೃತ್ವದ ಹಿಂದಿನ ಕಾಂಗ್ರೆಸ್ ಸರ್ಕಾರ ಹಾಗೂ ರಾಜ್ಯದಲ್ಲಿ ಸಿದ್ಧರಾಮಯ್ಯ ಮುಖ್ಯಮಂತ್ರಿಗಳಾದ ಅವಧಿಯಲ್ಲಿ ಹಮ್ಮಿಕೊಂಡಿದ್ದ ಜನಪರ ಯೋಜನೆಗಳನ್ನು ಜನಸಾಮಾನ್ಯರಿಗೆ ತಿಳಿಸುವ ಮೂಲಕ ಕಾಂಗ್ರೆಸ್ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಜಿ.ಪಂ. ಮಾಜಿ ಸದಸ್ಯರು ಹಾಗೂ ಜಿಲ್ಲಾ ಕಾಂಗ್ರೆಸ್ ಮುಖಂಡ ಕೆ.ಎಸ್. ಬಸವಂತಪ್ಪ ಚಾಲನೆ ನೀಡಿದರು.

ಆನಗೋಡು ಜಿ.ಪಂ. ಕ್ಷೇತ್ರದ ವ್ಯಾಪ್ತಿಯಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರೈತರ ಸಾಲ ಮನ್ನಾ, ಅಹಿಂದ ವರ್ಗದವರ ಕಲ್ಯಾಣಕ್ಕೆ ಸಾವಿರಾರು ಕೋಟಿಗಳನ್ನು ಮೀಸಲಿಟ್ಟಿರುವುದು ಹಾಗೂ ಸಮಾಜದ ಪ್ರತಿಯೊಬ್ಬ ಬಡವರಿಗೆ ಅನುಕೂಲವಾಗುವಂತೆ 'ಅನ್ನಭಾಗ್ಯ' ಯೋಜನೆಗಳನ್ನು ಜಾರಿಗೆ ತಂದು ರಾಜ್ಯದಲ್ಲಿ ಬಡ ಕುಟುಂಬಗಳಿಗೆ ನೆರವಾಗಿದ್ದನ್ನು ಸ್ಮರಿಸಿದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಮೆಕ್ಕೆಜೋಳ ಬೆಳೆಯುವ ರೈತರಿದ್ದು, ಅವರಿಗೆ ನೆರವಾಗಲು ಶೀಘ್ರದಲ್ಲಿಯೇ ಖರೀದಿ ಕೇಂದ್ರವನ್ನು ಸ್ಥಾಪಿಸಲು ಬಸವಂತಪ್ಪ ಒತ್ತಾಯಿಸಿದರು.

ಮಾಜಿ ತಾ.ಪಂ. ಸದಸ್ಯ ಶಂಭುಲಿಂಗಪ್ಪ, ಗ್ರಾ.ಪಂ. ಅಧ್ಯಕ್ಷ ಆನಗೋಡು ನಸ್ರುಲ್ಲಾ, ಗ್ರಾ.ಪಂ. ಸದಸ್ಯರಾದ ಕರಿಬಸಪ್ಪ, ಬಸವರಾಜ ಮತ್ತಿತರರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ. ಉಪಾಧ್ಯಕ್ಷ ನಾಗರಾಜ್, ಕೊಗ್ಗನೂರು ಮಾದಪ್ಪ, ರುದ್ರನಕಟ್ಟೆ ಉಮೇಶ್, ಗುಮ್ಮನೂರು ಲೋಕೇಶ್, ಕಾಂಗ್ರೆಸ್ ಮುಖಂಡರಾದ ಸನಾವುಲ್ಲಾ, ಪರಮೇಶ್ವರಪ್ಪ, ವಜೀರ್ ಅಹಮ್ಮದ್, ಇರ್ಷಾದ್, ಸಾಧಿಕ್, ಸಿದ್ದನೂರು ಪ್ರಕಾಶ್, ಕಂದನಕೋವಿ ಮಹೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಸೋಹೆಲ್ ಸೇರಿದಂತೆ, ಮತ್ತಿತರರು ಉಪಸ್ಥಿತರಿದ್ದರು.

## 14 ರಿಂದ ಜಿಲ್ಲಾ ಮಟ್ಟದ ಯುವಜನೋತ್ಸವ

ದಾವಣಗೆರೆ, ಡಿ.9- ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವು ಇದೇ ದಿನಾಂಕ 14 ರಂದು ನಗರದ ನಿಜಲಿಂಗಪ್ಪ ಬಡಾವಣೆಯ ಸರ್ಕಾರಿ ನೌಕರರ ಭವನದಲ್ಲಿ ನಡೆಯಲಿದೆ.

15 ರಿಂದ 29 ವರ್ಷ ವಯೋಮಾನದೊಳಗಿನ ಎಲ್ಲಾ ಯುವ ಜನರು ಭಾಗವಹಿಸಬಹುದು. ಯುವಜನೋತ್ಸವ ಕಾರ್ಯಕ್ರಮದಲ್ಲಿ ಗುಂಪು ಸ್ಪರ್ಧೆಗಳ ವಿಭಾಗದಲ್ಲಿ ಜಾನಪದ ನೃತ್ಯ, ಜಾನಪದ ಗೀತೆ, ವೈಯಕ್ತಿಕ ಸ್ಪರ್ಧೆಗಳ ವಿಭಾಗದಲ್ಲಿ ಕನ್ನಡ, ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಏಕಪಾತ್ರಾಭಿನಯ ಮತ್ತು ಆಶುಭಾಷಣ, ಶಾಸ್ತ್ರೀಯ ಸಂಗೀತದಲ್ಲಿ ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ, ಶಾಸ್ತ್ರೀಯ ನೃತ್ಯಗಳಲ್ಲಿ ಭರತ ನಾಟ್ಯ, ಒಡಿಸ್ಸಿ, ಮಣಿಪುರಿ, ಕೂಚುಪುಡಿ, ಕಥಕ್, ಕಥಕಳಿ, ಶಾಸ್ತ್ರೀಯ ವಾದ್ಯಗಳಲ್ಲಿ ಸಿತಾರ, ಕೊಳಲು, ತಬಲಾ, ವೀಣಾ, ಮೃದಂಗಂ ಹಾಗೂ ಹಾರ್ಮೋನಿಯಂ, ಗಿಟಾರ್ ಸ್ಪರ್ಧೆಗಳನ್ನು ನಡೆಸಲಾಗುವುದು.

ವಿವರಕ್ಕೆ ದೂ.: 08192-237480ನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಮಾನವ ಹಕ್ಕುಗಳ ರಕ್ಷಣೆಗೆ ಕಟಿಬದ್ಧರಾಗಿ ನಿಲ್ಲಬೇಕು

## ಜಗಳೂರಿನ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ



ಜಗಳೂರು, ಡಿ.11- ಪ್ರತಿಯೊಬ್ಬರೂ ಮಾನವ ಹಕ್ಕುಗಳ ರಕ್ಷಣೆಗೆ ಕಟಿಬದ್ಧರಾಗಿ ನಿಲ್ಲಬೇಕು ಎಂದು ಜೆಎಂಎಫ್‌ಸಿ ಮತ್ತು ಸಿವಿಲ್ ನ್ಯಾಯಾಧೀಶ ಜಿ. ತಿಮ್ಮಯ್ಯ ಕರೆ ನೀಡಿದರು.

ಪಟ್ಟಣದ ಕೋರ್ಟ್ ಸಭಾಂಗಣದಲ್ಲಿ ವಕೀಲರ ಸಂಘ ಹಾಗೂ ಕಾನೂನು ಸೇವಾ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್ .ಅಂಬೇಡ್ಕರ್ ಅವರ ಸಂವಿಧಾನದ ಕೊಡುಗೆಯಾಗಿ ಮೂಲಭೂತ ಕರ್ತವ್ಯಗಳು ನಮಗೆ ದೊರೆತಿವೆ. ಸ್ವಾಭಾವಿಕವಾಗಿ ನಮ್ಮಲ್ಲಿ ಅಡಗಿರುವ ಹಕ್ಕುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹಕ್ಕುಗಳ ಉಲ್ಲಂಘನೆ ಯಾಗದಂತೆ ಕಾಪಾಡಬೇಕಿದೆ.

ಸಂವಿಧಾನದ ಆತ್ಮವಾಗಿರುವ ಪೀಠಿಕೆಯನ್ನು ಹಾಗೂ ಮೂಲಭೂತ ಕರ್ತವ್ಯ ಮತ್ತು ಹಕ್ಕುಗಳ ಬಗ್ಗೆ ಓದಿ ಅರಿಯಬೇಕು ಎಂದು ತಿಳಿಸಿದರು.

ಕುವೆಂಪು ಅವರ ಆಶಯದಂತೆ ಸರ್ವರಿಗೂ ಸಮಪಾಲು ಸಮಬಾಳು ಸಾರಬೇಕಿದೆ. ಪ್ರಪಂಚಕ್ಕೆ ಸೂರ್ಯ ಜಾತ್ಯತೀತವಾಗಿ ಬೆಳಕು ಚೆಲ್ಲಿದಂತೆ ಏಕತೆಯಿಂದ ಸಮಾನತೆ ಕಲ್ಪಿಸಬೇಕು. ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ಶ್ರಮಕ್ಕೆ ತಕ್ಕಂತೆ ಶ್ರೇಷ್ಠ ಪಥದಲ್ಲಿ ಸಾಗಬೇಕು.ಕೆಲವರು ಕಾನೂನು ಅರಿವಿದ್ದೂ ಕೆಟ್ಟ ಹಾದಿ ಆಯ್ಕೆ ಮಾಡಿಕೊಂಡರೆ ಕಾನೂನು ಶಿಕ್ಷಿಸುತ್ತದೆ ಎಂದರು.

ಸರ್ಕಾರಿ ಸಹಾಯಕ ಅಭಿಯೋಜಕಿ ಎಂ.ರೂಪ, ವಕೀಲರಾದ ಬಸವರಾಜಪ್ಪ, ಪರಮೇಶ್ವರಪ್ಪ, ಶರಣಪ್ಪ, ವೈ.ಹನುಮಂತಪ್ಪ, ರುದ್ರೇಶ್, ತಿಪ್ಪೇಸ್ವಾಮಿ, ಎಸ್‌ಐ ಕುಂಬಾರ, ಡಿ.ಶ್ರೀನಿವಾಸ್, ಬಸವರಾಜ್, ಕರಿಬಸಪ್ಪ ,ಓಬಳೇಶ್, ನಾಗೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಇತಿಹಾಸ ಮರೆತವರ ಭೂ ಪ್ರದೇಶ ಉಳಿಯದು

ದಾವಣಗೆರೆ, ಡಿ. 11 - ಇತಿಹಾಸವನ್ನು ಚೆನ್ನಾಗಿ ತಿಳಿಯದವರ ದೇಶದ ಭೂಪ್ರದೇಶ ಎಂದೂ ಸುರಕ್ಷಿತವಾಗಿರುವುದಿಲ್ಲ. ಇತಿಹಾಸ ಸರಿಯಾಗಿ ತಿಳಿಯದ ಕಾರಣದಿಂದಾಗಿಯೇ ಭಾರತ ದೇಶವು ತನ್ನ ಭಾಗವಾಗಿದ್ದ ಪಾಕಿಸ್ತಾನ, ಟಿಬೆಟ್, ಬಾಂಗ್ಲಾದೇಶ, ನೇಪಾಳ ಹಾಗೂ ಶ್ರೀಲಂಕಾಗಳನ್ನು ಕಳೆದುಕೊಂಡಿತು ಎಂದು ಶಿವಮೊಗ್ಗದ ಜೆ.ಪಿ.ಎನ್. ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ. ದಿಲೀಪ್ ಕುಮಾರ್ ಪಾಂಡೆ ಹೇಳಿದ್ದಾರೆ.

ನಗರದ ವರ್ತಮಾನ ಫೋರಂ ಫಾರ್ ಇಂಟಲೆಕ್ಚುಯಲ್ ಡಿಬೇಟ್ಸ್ ವತಿಯಿಂದ ಶಾಂತಿ ರಾಯಲ್ ಹಾಲ್‌ನಲ್ಲಿ ಇಂದು ಆಯೋಜಿಸಲಾಗಿದ್ದ ಸ್ವರಾಜ್ಯ 75 - ಸ್ವ ಆಡಳಿತದಲ್ಲಿ ವಿಕಾಸದತ್ತ ಭಾರತ ಎಂಬ ವಿಷಯ ಕುರಿತು ಅವರು ಮಾತನಾಡಿದರು.

ಭಾರತ ಇತಿಹಾಸವನ್ನು ಈಗಲೂ ಮರೆತರೆ ಜಮ್ಮು ಮತ್ತು ಕಾಶ್ಮೀರ ಹಾಗೂ ಪಶ್ಚಿಮ ಬಂಗಾಳಗಳನ್ನು ಕಳೆದುಕೊಳ್ಳಲಿದೆ. ಇತಿಹಾಸದಲ್ಲಿ ಆಗಿರುವಂತೆ ಒಂದೊಂದೇ ಭಾಗವನ್ನು ಕಳೆದುಕೊಳ್ಳಲಿದೆ ಎಂದವರು ಎಚ್ಚರಿಸಿದ್ದಾರೆ.

ಇಸ್ಲಾಂ ಉಗಮದ ನಂತರ ಕೆಲವೇ ವರ್ಷಗಳಲ್ಲಿ ಪುರಾತನ ಸಂಸ್ಕೃತಿಗಳಾದ ಈಜಿಪ್ಟ್ ಹಾಗೂ ಮೆಸಪೊಟೋಮಿಯಾಗಳು ಇಸ್ಲಾಮೀಕರಣ ಗೊಂಡವು. ಆದರೆ, ಭಾರತ ಸಾವಿರಾರು ವರ್ಷಗಳು ಉರುಳಿದರೂ ತನ್ನ ಪ್ರಾಚೀನ ಇತಿಹಾಸದ ಸಂಸ್ಕೃತಿಯನ್ನು ಮುಂದುವರೆಸಿದೆ. ಇದಕ್ಕೆ ದೇಶದಲ್ಲಿ ಉಳಿಸಿಕೊಂಡಿರುವ ಸಂಸ್ಕೃತಿ ಹಾಗೂ ಸಂಸ್ಕಾ ರಗಳೇ ಕಾರಣ ಎಂದವರು ತಿಳಿಸಿದರು.

ಆದರೆ, ಮೈನಾರಿಟಿಸಂ, ಮಾರ್ಕ್ಸಿಸಂ ಹಾಗೂ ಮೆಕಾವಲಿಸಂ ಎಂಬ ಮೂರರ ಕಾರಣದಿಂದ ನಮ್ಮ ಶಿಕ್ಷಣ ಕುಂಠಿತವಾಗಿದೆ. ಮೆಕಾಲೆ ಶಿಕ್ಷಣ ಪದ್ಧತಿಯ ಮೂಲ ಉದ್ದೇಶವೇ ಭಾರತದ ಮೂಲ ಶಿಕ್ಷಣ ಪದ್ಧತಿಯ ಬೆನ್ನು ಮೂಳೆ ಮುರಿಯುವುದಾಗಿತ್ತು ಎಂದವರು ಹೇಳಿದರು.

ಇಂತಹ ಸಂಸ್ಕೃತಿ ಹಾಗೂ ಸಂಸ್ಕಾರಗಳ ಮೇಲೆ ಬ್ರಿಟಿಷರ ಮೆಕಾಲೆ ಶಿಕ್ಷಣ ಪದ್ಧತಿ ದಾಳಿ ಮಾಡಿದೆ. ದೇಶದ ಅಧ್ಯಾತ್ಮ ಹಾಗೂ ಮೂಲ ಸಂಗತಿಗಳೇ ಮರೆಯಾಗಿವೆ. ಭಾಸ್ಕರ, ಆರ್ಯಭಟ, ವರಾಹಮಿಹಿರ, ಚರಕ, ಸುಶ್ರುತರಿಂದ ಹಿಡಿದು ಪಕ್ಕದ ಹರಪನಹಳ್ಳಿಯ ಶ್ರೀಧರಾಚಾರ್ಯ ಅಂಥವರು ವಿಜ್ಞಾನಕ್ಕೆ ನೀಡಿದ ಕೊಡುಗೆಗಳನ್ನು ಪಠ್ಯದಿಂದ ಕಿತ್ತು ಹಾಕಲಾಗಿದೆ ಎಂದು ವಿಷಾದಿಸಿದರು.



ಇತಿಹಾಸ ಉಪನ್ಯಾಸಕ ಡಾ. ದಿಲೀಪ್ ಕುಮಾರ್ ಪಾಂಡೆ

ಈಜಿಪ್ಟ್, ಮೆಸಪೊಟೋಮಿಯ, ಚೀನ ಹಾಗೂ ಭಾರತದ ನಾಗರಿಕತೆಗಳು ಅತ್ಯಂತ ಪ್ರಾಚೀನವಾಗಿವೆ. ಈಜಿಪ್ಟ್ ಹಾಗೂ ಮೆಸಪೊಟೋಮಿಯ ನಾಗರಿಕತೆಗಳು ಮರೆಯಾಗಿವೆ. ಚೀನಾದಲ್ಲಿ ಶೇ.20ರಷ್ಟು ಮಾತ್ರ ಪ್ರಾಚೀನತೆ ಉಳಿದುಕೊಂಡಿದೆ. ಭಾರತದಲ್ಲಿ ಮಾತ್ರ ಪ್ರಾಚೀನ ನಾಗರಿಕತೆ ಶಾಶ್ವತ ಹಾಗೂ ನಿರಂತರವಾಗಿ ಉಳಿದುಕೊಂಡಿದೆ. ಇಂತಹ ನಾಗರಿಕತೆ ವಿಶ್ವಕ್ಕೇ ವಿಶಿಷ್ಟ ಹಾಗೂ ಮಾದರಿಯಾಗಿದೆ ಎಂದವರು ಹೇಳಿದರು.

ಭಾರತ ಮೊದಲಿನ ಶ್ರೀಮಂತಿಕೆ ಕಳೆದುಕೊಂಡಿದೆ. ಆದರೆ, ಸಂಸ್ಕಾರವನ್ನು ಉಳಿಸಿಕೊಂಡಿದೆ. ಸಂಸ್ಕಾರ ಹಾಗೂ ಸಂಸ್ಕೃತಿಗಳನ್ನು ಬೆಳೆಸಿದರೆ ಶ್ರೀಮಂತಿಕೆ ಮತ್ತೆ ಭಾರತಕ್ಕೆ ಬರಲಿದೆ. ನೂತನ ಶಿಕ್ಷಣ ಪದ್ಧತಿಯು ಈ ದಿಸೆಯಲ್ಲಿ ಆಶಾದಾಯಕವಾಗಿದೆ ಎಂದವರು ತಿಳಿಸಿದರು.

ಹೆಚ್.ಎಂ. ಪ್ರತೀಕ್ಷ ಮತ್ತು ಹರ್ಷಿತ ಆಶಯ ಗೀತೆ ಹಾಡಿದರು. ವರ್ತಮಾನ ಸದಸ್ಯ ಕೆ.ಎಂ. ಮೇಘರಾಜ್ ಅವರು ಸ್ವಾಗತಿಸಿದರು ಮತ್ತು ಸಾಯಿದೀಪ್ ವಂದಿಸಿದರು.

## ನಾವು ಅಂಬೇಡ್ಕರ್ ಅರ್ಥ ಮಾಡಿಕೊಂಡಿಲ್ಲ

ಸಂವಿಧಾನ ಶಿಲ್ಪಿಯಾದ ಡಾ. ಅಂಬೇಡ್ಕರ್ ಅವರು ನಮ್ಮನ್ನು ಅರ್ಥ ಮಾಡಿಕೊಂಡರು. ಆದರೆ, ನಾವೇ ಅಂಬೇಡ್ಕರ್ ಅವರನ್ನು ಅರ್ಥ ಮಾಡಿಕೊಂಡಿಲ್ಲ ಎಂದು ಉಪನ್ಯಾಸಕ ಡಾ. ದಿಲೀಪ್ ಕುಮಾರ್ ಪಾಂಡೆ ವಿಷಾದಿಸಿದ್ದಾರೆ.

ನಾನು ಹಿಂದೂ ಆಗಿ ಹುಟ್ಟಿದ್ದೇನೆ, ಆದರೆ, ಸಾಯುವುದಿಲ್ಲ ಎಂದು ಅಂಬೇಡ್ಕರ್ 1936ರಲ್ಲೇ ಹೇಳಿದ್ದರು. ನಂತರದ 26 ವರ್ಷಗಳವರೆಗೆ ಅವರು ವಿಶ್ವದ ಎಲ್ಲ ಧರ್ಮಗಳ ಅಧ್ಯಯನ ಮಾಡಿದರು. ಅಂತಿಮವಾಗಿ ಬೌದ್ಧ ಧರ್ಮ ಅಪ್ಪಿಕೊಂಡರು. ಕ್ರಿಶ್ಚಿಯನ್ ಹಾಗೂ ಇಸ್ಲಾಮಿಕ್ ಮುಖಂಡರು ಯಾವುದೇ ಆಮಿಷ ಒಡ್ಡಿದರೂ ಒಪ್ಪಲಿಲ್ಲ. ಇದು ಭಾರತೀಯ ಸಂಸ್ಕೃತಿಯ ಬಗ್ಗೆ ಅಂಬೇಡ್ಕರ್ ಹೊಂದಿದ್ದ ಕಾಳಜಿ ತೋರಿಸುತ್ತದೆ ಎಂದರು.ಭಾರತ ಮತ್ತು ಪಾಕಿಸ್ತಾನಗಳ ವಿಭಜನೆಯಾದಾಗ ಶೇ.100ರಷ್ಟು ಜನಸಂಖ್ಯೆ ವಿನಿಮಯ ಆಗಬೇಕು ಎಂದು ಹೇಳಿದ ಏಕೈಕ ನಾಯಕ ಅಂಬೇಡ್ಕರ್ ಎಂದವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿ ಬೇಡ ಎಂದು ಅವರು ಪಟ್ಟು ಹಿಡಿದಿದ್ದರು. ಒತ್ತಡ ಹೆಚ್ಚಾದಾಗ ಈ ವಿಧಿಯನ್ನು ತಾತ್ಕಾಲಿಕ ಎಂದು ನಮೂದಿಸಿದರು. ಇದರಿಂದಾಗಿಯೇ 370ನೇ ವಿಧಿ ಸುಲಭವಾಗಿ ರದ್ದು ಮಾಡಲು ಸಾಧ್ಯವಾಯಿತು ಎಂದು ಪಾಂಡೆ ಹೇಳಿದರು.

ಅಂಬೇಡ್ಕರ್ ಅವರು ಭಾರತದ ಅಂತಃಸತ್ವವನ್ನು ಸಂಪೂರ್ಣ ಅರ್ಥ ಮಾಡಿಕೊಂಡಿದ್ದರು. ಅಂಬೇಡ್ಕರ್ ಅವರನ್ನು ಸಂಪೂರ್ಣವಾಗಿ ಅರಿತುಕೊಂಡಾಗ ಅವರು ಭಾರತೀಯ ಸಂಸ್ಕೃತಿಗೆ ನೀಡಿರುವ ಕೊಡುಗೆ ತಿಳಿಯುತ್ತದೆ ಎಂದವರು ತಿಳಿಸಿದರು.

# ಕಾಯ್ದೆ ವಾಪಸ್ : ಆರ್‌ಕೆಎಸ್ ವಿಜಯೋತ್ಸವ

ದಾವಣಗೆರೆ, ಡಿ.11- ರೈತರು ನಡೆಸುತ್ತಿದ್ದ ಸುದೀರ್ಘ ಹೋರಾಟಕ್ಕೆ ಮಣಿದು ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಇಂದು ಸಂಯುಕ್ತ ಹೋರಾಟ ಕರ್ನಾಟಕದ ಜಿಲ್ಲಾ ಘಟಕದಿಂದ ವಿಜಯೋತ್ಸವ ಆಚರಿಸಲಾಯಿತು.




ಗಾಂಧಿ ವೃತ್ತದಲ್ಲಿ ಜಮಾಯಿಸಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರು, ರೈತ ಹೋರಾಟದ ಪರವಾಗಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆರ್‌ಕೆಎಸ್‌ನ ರಾಜ್ಯಾಧ್ಯಕ್ಷ ಡಾ. ಕೆ. ಸುನೀತ್ ಕುಮಾರ್, ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಒತ್ತಾಯ ಪೂರ್ವಕವಾಗಿ ಹೇರಿದ ಸಂದರ್ಭದಲ್ಲಿ ರೈತರು ಹೋರಾಟ ಮಾಡಿದರು. ಕೇಂದ್ರ ಸರ್ಕಾರ ಪ್ರತಿಭಟನೆ ನಡೆಸುತ್ತಿರುವವರು ದೇಶದ್ರೋಹಿ ಗಳು, ಭಯೋತ್ಪಾದಕರು, ಖಲಿಸ್ಥಾನಿಗಳು ಎಂದೆಲ್ಲಾ ಕರೆದು ರೈತರನ್ನು ಅವಮಾನಿಸಿದರು. ಆದರೂ ರೈತರು ಎದೆಗುಂದದೆ ಕೆಚ್ಚೆದೆಯಿಂದ ವರ್ಷ ಕಾಲ ಸುದೀರ್ಘ ಹೋರಾಟ ನಡೆಸಿದರು. ಈ ಹೋರಾಟದಲ್ಲಿ 700ಕ್ಕೂ ಹೆಚ್ಚು ಜನ ರೈತರು ಮೃತ ಪಟ್ಟಿದ್ದಾರೆ. ಹಲವರ ತ್ಯಾಗ ಬಲಿದಾನವಾಗಿದೆ. ಕೊನೆಗೂ ಸರ್ಕಾರ ಈ ಹೋರಾಟಕ್ಕೆ ಮಣಿದು ಕರಾಳ ಕೃಷಿ ಕಾಯ್ದೆಯನ್ನು ವಾಪಸ್ ಪಡೆದಿರುವುದು ರೈತ ಕುಲಕ್ಕೆ ಸಿಕ್ಕ ಜಯವಾಗಿದೆ ಎಂದು ಹೇಳಿದರು.

ಎಐಕೆಎಎಸ್ ಮುಖಂಡ ಐರಣಿ ಚಂದ್ರು ಮಾತನಾಡಿ, ಕರಾಳ ಕೃಷಿ ಕಾಯಿದೆಗಳ ವಿರುದ್ಧ ಸುದೀರ್ಘ ಹೋರಾಟ ನಡೆಸಿ ಗೆದ್ದಿರುವ ರೈತರಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅದಾನಿ, ಅಂಬಾನಿಗಳಿಗೆ ದೇಶದ ಸಾರ್ವಜನಿಕ ಸಂಸ್ಥೆಗಳನ್ನು ಮಾರಾಟ ಮಾಡುತ್ತಿರುವುದನ್ನು ತಡೆಯುವ ಶಕ್ತಿಯೂ ಇದೆ. ಆದ್ದರಿಂದ ಸರ್ಕಾರ ಈ ಹೋರಾಟದಿಂದ ಎಚ್ಚೆತ್ತು ಜನವಿ ರೋಧಿ ನೀತಿಗಳನ್ನು ತಕ್ಷಣ ಕೈಬಿಡಬೇಕು ಎಂದು ಒತ್ತಾಯಿಸಿದರು.

ಎಐಡಿವೈಓ ಮುಖಂಡ ಮಧು ತೊಗಲೇರಿ ಮಾತನಾಡಿ, ಕೇಂದ್ರ ಸರ್ಕಾರ ರೈತರ ಬೆಳೆಗಳಿಗೆ ನಿಗದಿ ಮಾಡುವ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಮಾನ್ಯತೆ ನೀಡಬೇಕು. ಹೋರಾಟದಲ್ಲಿ ಮೃತಪಟ್ಟ 700ಕ್ಕೂ ಹೆಚ್ಚು ರೈತರಿಗೆ ತಕ್ಷಣವೇ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಅಣಬೇರು ತಿಪ್ಪೇಸ್ವಾಮಿ, ಬಿ.ಆರ್.ಅಪರ್ಣ, ಎಂ. ಕರಿಬಸಪ್ಪ, ಈ.ಶ್ರೀನಿವಾಸ್, ಕೆ.ಎಚ್. ಆನಂದರಾಜ್, ಹೆಗ್ಗೆರೆ ರಂಗಪ್ಪ, ಭಾರತಿ, ಬಸವರಾಜ್, ಆದಿಲ್ ಖಾನ್ ಸೇರಿದಂತೆ ಇತರರು ಇದ್ದರು.

# ಹೊನ್ನಾಳಿ: ಬೆಳ್ಳಿಗದೆ ಗೆದ್ದ ಪೈಲ್ವಾನ್ ಕಿರಣ್



ಹೊನ್ನಾಳಿ, ಡಿ.11- ದೊಡ್ಡಕೇರಿ ಬೀರಲಿಂಗೇಶ್ವರ ದೇವರ ಕಾರ್ತಿಕೋತ್ಸವದ ಅಂಗವಾಗಿ ಇಲ್ಲಿ ಕಳೆದ ಮೂರು ದಿನಗಳಿಂದ ನಡೆದ ಜಿದ್ದಾ-ಜಿದ್ದಿ ಕುಸ್ತಿ ಪಂದ್ಯದಲ್ಲಿ ಪ್ರಥಮ ಸ್ಥಾನ ಗಳಿಸಿದ ಶಿವಮೊಗ್ಗದ ಕಿರಣ್ ಪೈಲ್ವಾನ್ 20 ಸಾವಿರ ನಗದು ಬಹುಮಾನದ ಜೊತೆಗೆ ಬೆಳ್ಳಿ ಗದೆಯನ್ನು ತಮ್ಮದಾಗಿಸಿಕೊಂಡರು.

ದ್ವಿತೀಯ ಸ್ಥಾನವನ್ನು ಕೊಲ್ಲಾಪುರ ಅರುಣ್, ತೃತೀಯ ಸ್ಥಾನವನ್ನು ಬೆಳಗಾಂನ ಅಬ್ಬು ಪೈಲ್ವಾನ್ ಪಡೆದರು.

ಈ ಸಂದರ್ಭದಲ್ಲಿ ದೇವರ ಗಣ ಮಕ್ಕಳಾದ ಅಣ್ಣಪ್ಪ ಸ್ವಾಮಿ, ಕುಮಾರಸ್ವಾಮಿ, ಕುಸ್ತಿ ಕಮಿಟಿ ಅಧ್ಯಕ್ಷ ವಿಜೇಂದ್ರಪ್ಪ, ಗೌರವಾಧ್ಯಕ್ಷ ಫಾಲಾಕ್ಷಪ್ಪ, ಉಪಾಧ್ಯಕ್ಷರಾದ ಎಂ. ವಾಸಪ್ಪ, ರಂಗಪ್ಪ, ಗುಡ್ಡಜ್ಜಿ ತಮ್ಮಣ್ಣ, ಇಟ್ಟಿಗೆ ಬಸವರಾಜ್, ಕಾಡಸಿದ್ದಪ್ಪ, ಎಚ್.ಬಿ. ದೇವರಾಜ್, ಶಿವು ಚೋರಡಿ, ಕೆಂಚಪ್ಪ, ರಾಜಪ್ಪ, ವೆಂಕಟೇಶ, ಎನ್.ಕೆ.ರಾಜಪ್ಪ, ಗುಡ್ಡಜ್ಜಿ ಮೂರ್ತೆಪ್ಪ, ಎಚ್.ಡಿ. ಮಲ್ಲಿಕಾರ್ಜುನ್ ಇತರರು ಕುಸ್ತಿ ಪ್ರದರ್ಶನ ವ್ಯವಸ್ಥಿತವಾಗಿ ನಡೆಯಲು ಸಹಕರಿಸಿದರು.

ಬಹುಮಾನ ವಿತರಣಾ ಸಮಾರಂಭದ ಅತಿಥಿಗ ಳಾಗಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಪುರಸಭಾ ಅಧ್ಯಕ್ಷ ಬಾಬು ಹೋಬಳದಾರ, ಸಿಪಿಐ ದೇವರಾಜ್, ಎಸ್‌ಐ ಬಸವನಗೌಡ ಬಿರಾದರ್, ಗೌಡ್ರು ನರಸಪ್ಪ, ಗಾಳಿ ನಾಗರಾಜ್, ಮೋಹನ್, ಧರ್ಮಪ್ಪ, ಕತ್ತಿಗೆ ನಾಗರಾಜ್, ದಿಡಗೂರು ಪಾಲಾಕ್ಷಪ್ಪ, ಕೆ.ವಿ. ಚನ್ನಪ್ಪ, ವಿನಯ್ ಸೇರಿದಂತೆ ದೇವಸ್ಥಾನ ಸಮಿತಿ ಸದಸ್ಯರು, ಕುಸ್ತಿ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.




# ವಾರ ಭವಿಷ್ಯ

**ದಿನಾಂಕ : 12.12.2021 ರಿಂದ 18.12.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವ್ಯವಹಾರ ಕೈಗೂಡಬೇಕಾದರೆ ಹಣ ಸೋರಿಕೆ ತಡೆಗಟ್ಟಲು ಯತ್ನಿಸಿ. ಅದರ ಮೂಲ ಕಂಡುಕೊಳ್ಳಿ, ಇಲ್ಲವಾದಲ್ಲಿ ನಷ್ಟ ಅನುಭವಿಸಬೇಕಾದೀತು. ಮಂಗಳ ಕಾರ್ಯಕ್ಕೆ ಭಾರೀ ಪೂರ್ವ ಸಿದ್ಧತೆ ನಡೆಯಲಿದೆ. ಸಂಗೀತ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಗುರುಗಳ ಮೊರೆ ಹೋಗಿ. ಖಾಸಗಿ ಕಂಪನಿ ಕೆಲಸ ಮಾಡುವವರು ಇಷ್ಟಕ್ಕೇ ತೃಪ್ತಿ ಪಟ್ಟುಕೊಳ್ಳಿ. ಬ್ಯಾಂಕಿನ ಮೇಲಾಧಿಕಾರಿಗಳು ವಂಚಕರ ಜಾಡನ್ನು ಭೇದಿಸಿ, ಸಂಸ್ಥೆಯಿಂದ ಹೊಗಳಿಕೆ, ಗೌರವ ಪಡೆಯುವರು. ವ್ಯಾಪಾರ ಅಭಿವೃದ್ಧಿಗೆ ಹಣಕಾಸಿನ ನೆರವು ಹರಿದು ಬರಲಿದೆ. ಅತಿ ಮೋಜು ಮಸ್ತಿ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಗುರಿ ಸಾಧನೆಯ ಪ್ರಯತ್ನದ ಜೊತೆಗೆ ತಾಳ್ಮೆ ಕೂಡ ಮುಖ್ಯ. ಯಾರೋ ಆಡಬಹುದಾದ ಮಾತುಗಳಿಗೆ, ಟೀಕೆಗಳಿಗೆ ತಲೆಕೆಡಿಸಿಕೊಳ್ಳಬೇಡಿ. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನಡೆಸುವವರಿಗೆ ಯಂತ್ರಗಳಲ್ಲಿ ಆಗಿಂದಾಗ್ಗೆ ಕಂಡು ಬರುವ ತೊಂದರೆ ತಡೆಯಲು ಉತ್ತಮ ತಜ್ಞರನ್ನು ನೇಮಿಸಿಕೊಳ್ಳಿ. ಹಿತಶತ್ರುಗಳ ಕಾಟದಿಂದ ಮುಕ್ತರಾಗಲು ಹೊಂದಾಣಿಕೆ ಏಕೈಕ ಮಾರ್ಗ. ಕೌಟುಂಬಿಕ ವ್ಯಾಜ್ಯಗಳಿಗೆ ಕೋರ್ಟ್ ಕಛೇರಿಯೆಂದಲೇ ಹಿರಿಯರ ಸಮಕ್ಷಮ ಬಗೆಹರಿಸಿಕೊಳ್ಳಿ. ಮಡದಿಯ ಸಂತೃಪ್ತಿಗೆ ಆಭರಣ ಖರೀದಿ ಅನಿವಾರ್ಯ. ಬುಧ, ಶುಕ್ರ, ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಕೆಲಸ ಕಾರ್ಯಗಳು ಕೈಗೂಡಲು ಬೇರೆಯವರ ನೆರವಿನ ಜೊತೆಗೆ ಇಚ್ಛಾಶಕ್ತಿಯೂ ಮುಖ್ಯ. ಹಂತ ಹಂತವಾದ ಅಭಿವೃದ್ಧಿಯಿಂದ ಹೆಚ್ಚಿನ ಲಾಭ. ಮನಸ್ಸಿಗೆ ಮುದ. ನೆರೆಹೊರೆಯವರೊಂದಿಗಿನ ವೈಷಮ್ಯ ದೂರವಾಗಿ ಸೌಹಾರ್ದತೆ ಮೂಡಲಿದೆ. ಮಡದಿ, ಮಕ್ಕಳನ್ನು ಸಂತೃಪ್ತಿಪಡಿಸಲು ಇಷ್ಟವಿಲ್ಲದಿದ್ದರೂ ವಿಹಾರ ಧಾಮಗಳಿಗೆ ಹೋಗುವಿರಿ. ಖರ್ಚು ಹೆಚ್ಚಾಗಲಿದೆ. ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದಾಗುತ್ತಿರುವ ಕಿರುಕುಳ ಕಡಿಮೆಯಾಗಲಿದೆ. ಆದಾಯ ಮೂಲ ಸಾಧಾರಣವಾಗಿರುವುದರಿಂದ ವೈಯಕ್ತಿಕ ಹವ್ಯಾಸಗಳಿಗೆ ಕಡಿವಾಣ ಹಾಕದೇ ವಿಧಿಯಿಲ್ಲ. ಅತಿಯಾದ ಭಾವುಕತೆ ಬೇಡ. ಸೋಮ, ಬುಧ, ಗುರು ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ರಾಜಕೀಯ ಪ್ರವೇಶದ ಮೊದಲು ತಳಹಂತದ ತರಬೇತಿ ಅವಶ್ಯಕ. ಹಿರಿಯ ರಾಜಕಾರಣಿಗಳಿಂದ ಅದಕ್ಕೆ ಬೇಕಾದ ಮಾರ್ಗದರ್ಶನ ಪಡೆಯಿರಿ. ಇಲ್ಲವಾದಲ್ಲಿ ಎಲ್ಲವನ್ನೂ ಕಳೆದುಕೊಳ್ಳುವ ಪ್ರಸಂಗ ಬಂದೀತು. ವೈಯಕ್ತಿಕ ಆರೋಗ್ಯ ಕಡೆಗಣಿಸದೇ ವಿಶೇಷ ಕಾಳಜಿ ವಹಿಸಿ. ಹದಗೆಟ್ಟ ಪರಿಸ್ಥಿತಿ ಸರಿದೂಗಲು ಹೊಸ ದಾರಿಯೊಂದು ಗೋಚರಿಸಿ, ತೃಪ್ತಿ ಪಡೆಯುವಿರಿ. ಸಾರ್ವಜನಿಕ ಸೇವೆ ಮಾಡುವ ಉತ್ಸಾಹ ಮೂಡಲಿದೆ. ವೈಯಕ್ತಿಕ ಬದುಕಿಗೆ ತೊಂದರೆಯಾಗದಂತೆ ಎಚ್ಚರ ವಹಿಸಿ. ವಿದ್ಯಾರ್ಥಿಗಳ ಸಾಧನೆಗೆ ಉತ್ತಮ ವೇದಿಕೆ ದೊರೆಯಲಿದೆ. ಸದುಪಯೋಗಪಡಿಸಿಕೊಳ್ಳಿ. ಹಣಕಾಸಿನ ವ್ಯವಹಾರದಲ್ಲಿ ಮೂಗು ತೂರಿಸುವುದು ಬೇಡ. ಸೋಮ, ಗುರು, ಶುಕ್ರ ಶುಭದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಎದುರಾಳಿ ಬುದ್ಧಿವಂತಿಕೆ ಎದುರಿಸಿ, ಕಷ್ಟಸಾಧ್ಯವಾಗಿರುವ ಕೆಲಸಗಳನ್ನು ಸಾಧಿಸಿ ಪದೋನ್ನತಿ ಪಡೆಯುವಿರಿ. ಅಗತ್ಯಕ್ಕೆ ತಕ್ಕ ಆದಾಯವಿರುವುದರಿಂದ ಮತ್ತೊಬ್ಬರಿಗೆ ಹಣದ ಭರವಸೆ ಕೊಡಬೇಡಿ. ಹಿರಿಯರ ಆರೋಗ್ಯ ನಿಮಿತ್ತ ತುಸು ಹಚ್ಚಿನ ವೈದ್ಯಕೀಯ ವೆಚ್ಚವಾಗುವ ಸಂಭವ. ಚಿಕ್ಕಮಕ್ಕಳ ಜಗಳದಿಂದ ಅಕ್ಕಪಕ್ಕದ ಮನೆಯವರೊಂದಿಗೆ ವೈರತ್ವ ಕಟ್ಟಿಕೊಳ್ಳಬೇಕಾಗಬಹುದು. ಶಾಂತತೆಯಿಂದ ಬಗೆಹರಿಸಿ. ವಿದೇಶದಲ್ಲಿ ಉನ್ನತಾಧ್ಯಯನ ಮಾಡುವವರಿಗೆ ಷರತ್ತುಬದ್ಧ ನೆರವು. ಆಸ್ತಿ, ಹೊಸ ವಾಹನ ಖರೀದಿ ವಿಚಾರ ಸದ್ಯದ ಮಟ್ಟಿಗೆ ಮುಂದೂಡಿ. ದೂರ ಪ್ರಯಾಣ ಮುಂದೂಡುವುದು ಉತ್ತಮ. ಅನಿವಾರ್ಯವಿದ್ದಲ್ಲಿ ಪೂರ್ವ ತಯಾರಿಯೊಂದಿಗೆ ಹೊರಡುವುದು ಲೇಸು. ಭಾನು, ಮಂಗಳ, ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಇಚ್ಛೆಪಟ್ಟು ಆರಂಭಿಸಿದ ವ್ಯವಹಾರದಲ್ಲಿ ಕ್ರಮೇಣ ಆದಾಯದಲ್ಲಿ ಹೆಚ್ಚಳ. ಕಾಲಾವಕಾಶ ಬೇಕು. ಅವಸರದಲ್ಲಿ ಆದ ಅಡುಗೆ ಅರುಚಿ ನೆನಪಿರಲಿ. ವಿರೋಧ ಎದುರಿಸಲು ನೀವೇನು ಹೆಚ್ಚು ಶ್ರಮ ಪಡಬೇಕಿಲ್ಲ. ಅವರ ತಂತ್ರಗಳು ಅವರಿಗೇ ತಿರುಗುಬಾಣವಾಗಲಿದೆ. ಆದರೆ ಅಹಂಕಾರದಿಂದ ನಿಮ್ಮವರೇ ನಿಮ್ಮ ವಿರುದ್ಧವಾಗದಂತೆ ಎಚ್ಚರವಹಿಸಿ. ಸರ್ಕಾರದಿಂದಾಗುವ ಕೆಲಸಗಳಿಗೆ ಮಧ್ಯವರ್ತಿಗಳ ಮೊರೆ ಹೋಗದೆ ಗತಿಯಿಲ್ಲ. ಹಣದ ಒಳಹರಿವು ಸಾಧಾರಣ. ಹೊಸ ಯೋಜನೆ ಸದ್ಯದ ಮಟ್ಟಿಗೆ ಬೇಡ. ಮನೆತನದ ಗೌರವ ಕಾಪಾಡಲು ಹರಸಾಹಸ ಪಡುವಿರಿ. ಮಗನ ಮದುವೆ ಪ್ರಸ್ತಾಪ ಅನಿವಾರ್ಯ ಕಾರಣಗಳಿಂದ ರದ್ದಾಗಲಿದೆ. ಗುರು ಸೇವೆ ವಿಶೇಷವಾಗಿ ಮಾಡಿ. ಮಂಗಳ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ವಾರದ ಆರಂಭದಲ್ಲಿ ಅನಿರೀಕ್ಷಿತ ವ್ಯಾಪಾರ-ವ್ಯವಹಾರಗಳಲ್ಲಿ ವಿಪರೀತ ಏರುಪೇರು. ವಾರಾಂತ್ಯದಲ್ಲಿ ಹಿಡಿತಕ್ಕೆ ಬರಲಿದೆ. ಬಂಧುಗಳ ಮನೆಯಲ್ಲಿ ನಡೆಯುವ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ವಿಶೇಷ ಉಡುಗೊರೆಗಳ ವಿನಿಮಯವಾಗಲಿದೆ. ಪ್ರಾಪ್ತ ವಯಸ್ಕರಾದ ಮಕ್ಕಳಿಗೆ ಜವಾಬ್ದಾರಿ ಕೊಡುವುದರಿಂದ ತುಸು ವಿಶ್ರಾಂತಿ ದೊರೆಯಲಿದೆ. ಉನ್ನತಾಧ್ಯಯನಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಿರುವ ಅಭ್ಯರ್ಥಿಗಳು ಉತ್ಸಾಹ ಕಲೆದುಕೊಳ್ಳಬೇಡಿ. ಹಣದ ಹರಿವು ಸಾಧಾರಣ. ಆಡಂಬರದ ಜೀವನಕ್ಕೆ ಅಂಟಿಕೊಳ್ಳುವುದರಲ್ಲಿ ಅರ್ಥವಿಲ್ಲ. ಚಿಕ್ಕಮಕ್ಕಳ ಆರೋಗ್ಯದಲ್ಲಿ ಅನಿರೀಕ್ಷಿತ ಏರುಪೇರು ಸಂಭವ. ಸೂಕ್ತ ವೈದ್ಯರ ಸಂಪರ್ಕದಲ್ಲಿರಿ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕಳೆದ ವಾರದ ಅರ್ಧಕ್ಕೆ ನಿಂತಿದ್ದ ಕೆಲಸಗಳು ಚಾಲನೆ ಪಡೆಯಲಿವೆ. ಪುನಃ ನಿಲ್ಲದಂತೆ ನೋಡಿಕೊಳ್ಳಿ. ಪರಮಾಪ್ತ ಮಿತ್ರರಲ್ಲಿ ಕಳೆದುಕೊಂಡಿದ್ದ ವಿಶ್ವಾಸ ಗಳಿಸುವುದರಲ್ಲಿ ಯಶಸ್ವಿಯಾಗುವಿರಿ. ನಿಷ್ಠೂರ ಅಥವ ಕಠಿಣೋಕ್ತಿಗಳಿಂದ ಬಂಧು ಬಾಂಧವರ ನಂಬಿಕೆ ಕಳೆದು ಹೋಗುವುದು. ಇದಕ್ಕೆ ಆಸ್ಪದ ಕೊಡಬೇಡಿ. ಆದಾಯ ಉತ್ತಮವಾಗಿಯೇ ಇರುವುದು. ಪಾಲುದಾರಿಕೆ ವ್ಯವಹಾರದಲ್ಲಿ ನಿಮ್ಮ ನಿರ್ಧಾರಕ್ಕೆ ಹೆಚ್ಚಿನ ಬೆಂಬಲ. ಇದರಿಂದ ಅಭಿವೃದ್ಧಿ ಮತ್ತು ಲಾಭ ಗಳಿಸುವಿರಿ. ತರಕಾರಿ, ಹೂವು, ಹಣ್ಣು ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಕಾಡಲಿದೆ. ತಾಳ್ಮೆ, ಜಾಣ್ಮೆ ಇದಕ್ಕೆ ಪರಿಹಾರ. ಹಿರಿಯರನ್ನು ಗೌರವಿಸಿ. ಭಾನು, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಬೇಡದಿರುವ ವಿಷಯಗಳಿಗೆ ಮಹತ್ವ ಕೊಡುತ್ತಾ ಹೋದಲ್ಲಿ ವೈಯಕ್ತಿಕ ವಿಷಯಗಳು ಬೆಲೆ ಕಳೆದುಕೊಳ್ಳುತ್ತವೆ. ಅಲಕ್ಷೆ ಬೇಡ. ವೃತ್ತಿಗೆ ಸಂಬಂಧಿಸಿದ ಮಹತ್ತರ ನಿರ್ಧಾರ ತೆಗೆದುಕೊಳ್ಳುವ ಮೊದಲು ಅನುಭವಿಗಳೊಂದಿಗೆ ಚರ್ಚಿಸಿ, ಹೆಜ್ಜೆ ಇಡಿ. ಮಹಿಳಾ ರಾಜಕಾರಣಗಳಿಗೆ ಪಕ್ಷದ ವರಿಷ್ಠರ ಬೆಂಬಲದಿಂದ ಹೆಚ್ಚಿನ ಜವಾಬ್ದಾರಿ, ಉನ್ನತ ಸ್ಥಾನ ದೊರೆಯಲಿವೆ. ಹೊಸದಾಗಿ ನೌಕರಿಗೆ ಸೇರಿದವರು ಅನುಭವಿ ಸಹೋದ್ಯೋಗಿಗಳ ನೆರವು ಪಡೆಯಿರಿ. ಖರ್ಚು-ವೆಚ್ಚಗಳು ಸಮವಾಗಿವೆ. ಆದಾಯ ಹೆಚ್ಚಿದ್ದರೂ ಉಳಿತಾಯದ ನಿರೀಕ್ಷೆ ಬೇಡ. ವಾಹನಗಳ ಬಿಡಿಭಾಗಗಳ ಮಾರಾಟದಿಂದ ಲಾಭ ಅಷ್ಟಕ್ಕಷ್ಟೆ. ಕುಲದೇವತಾರಾಧನೆಯಿಂದ ಪುಣ್ಯಪ್ರಾಪ್ತಿ. ಬುಧ, ಗುರು, ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕಳೆದ ವಾರ ಕೆಲಸದ ಒತ್ತಡದಲ್ಲೇ ಕಳೆದ ನಿಮಗೆ ಈ ವಾರ ತುಸು ಬಿಡುವು ಸಿಗಲಿದೆ. ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವವರಿಗೆ ಸಕಲ ಸವಲತ್ತುಗಳು ಸಿಗಲಿವೆ. ಹಣಕಾಸಿನ ಹರಿವು ನಿಮ್ಮ ನಿರೀಕ್ಷೆಗೆ ಮೀರಿರುವುದರಿಂದ ಚಿಂತೆ ಬೇಡ. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಆಸ್ತಿ ಖರೀದಿ ವಿಚಾರ ಮುನ್ನೆಲೆಗೆ ತರಲು ಅಡ್ಡಿಯಿಲ್ಲ. ಸೋದರಿಯಿಂದ ಬೆಂಬಲ. ಸಿಕ್ಕಿದ್ದೆಲ್ಲಾ ತಿಂದಿದ್ದರ ಪರಿಣಾಮ ದೇಹದಲ್ಲಿ ತುರಿಕೆ ಮೊದಲಾದ ಚರ್ಮ ಸಂಬಂಧಿ ಕಾಯಿಲೆಗಳು ಬಾಧಿಸಬಹುದು. ಕೆಲವು ವಿಚಾರಗಳಲ್ಲಿ ಗಟ್ಟಿ ನಿರ್ಧಾರ ತೆಗೆದುಕೊಳ್ಳಿ. ಹೈನುಗಾರಿಕೆಯಿಂದ ಹೆಚ್ಚಿನ ಲಾಭ. ಸೋಮ, ಗುರು, ಶನಿ ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಬಿಸಿ ರಕ್ತದ ತರುಣರಿಗೆ ಆತ್ಮಾಭಿಮಾನ ಹೆಚ್ಚಲಿದೆ. ಇದು ದುರಭಿಮಾನಕ್ಕೆ ಕಾರಣವಾಗಬಾರದು. ಮಗನ ವೃತ್ತಿಯಲ್ಲಿ ಪದೋನ್ನತಿ ಜೊತೆಗೆ ವೇತನದಲ್ಲಿ ಹೆಚ್ಚಳ ಕಂಡು ಬರಲಿದೆ. ಆರ್ಥಿಕ ಮೂಲದಲ್ಲಿ ಹೆಚ್ಚಳ. ಭೂಮಿ ಖರೀದಿಗೆ ಹೆಚ್ಚಿನ ಉತ್ಸಾಹ ತೋರುವಿರಿ. ಮೊದಲು ಅದಕ್ಕೆ ಸಂಬಂಧಪಟ್ಟ ದಾಖಲೆ ಪರಿಶೀಲಿಸಿ. ಇಲ್ಲವಾದಲ್ಲಿ ಮೋಸ ಹೋಗುವ ಪ್ರಸಂಗ ಬಂದೀತು. ಪದವೀಧರ ಮಗಳಿಗೆ ಉತ್ತಮ ವೇತನದ ಕೆಲಸ ಖಾಸಗಿ ಕಂಪನಿಯಲ್ಲಿ ಸಿಗಲಿದೆ. ಸಾಗಾಣಿಕೆ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ಸರ್ಕಾರದಿಂದ ಅಷ್ಟೇ ಕಿರುಕುಳ ಅನುಭವಿಸಬೇಕಾದೀತು. ಹಿರಿಯ ಕೋರಿಕೆ ಬೇಗನೇ ಪೂರೈಸಲು ಯತ್ನಿಸಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಗೋ ಸೇವೆ ಮಾಡಿ. ಗುರು, ಶುಕ್ರ ಶನಿ ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝು.ಥ.ದೆ.ದೋ.ಖ.ಚ.ಚಿ.)**

ಕೃಷಿ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ. ಕೃಷಿ ಉಪಕರಣ ಮಾರಾಟಗಾರರಿಗೆ ಕೈತುಂಬಾ ಸಂಪಾದನೆ. ವಿದ್ಯಾರ್ಥಿಗಳ ಸೋಮಾರಿತನದಿಂದ ಅಧ್ಯಯನದಲ್ಲಿ ಹಿನ್ನಡೆ. ಮಡದಿಗೆ ಬಹುನಿರೀಕ್ಷಿತ ಆಸ್ತಿಯಲ್ಲಿ ಪಾಲು ಸಿಗಲಿದೆ. ಅದು ಅಪವ್ಯಯವಾಗುವ ಸಂಭವವಿದೆ. ಎಚ್ಚರ ವಹಿಸಿ. ಶ್ವಾಸಕೋಶ ಉಸಿರಾಟದ ತೊಂದರೆಯಿದ್ದಲ್ಲಿ ಎಚ್ಚರ. ತುರ್ತು ಉಪಯೋಗಕ್ಕೆ ಔಷಧಿ ಸಂಗ್ರಹಿಸಿಕೊಳ್ಳಿ. ಹೊಸದಾಗಿ ವೃತ್ತಿ ಆರಂಭಿಸುವವರಿಗೆ ಮತ್ತು ಕೈಗಾರಿಕೆಗಳನ್ನು ಆರಂಭಿಸುವವರಿಗೆ ಮಹಿಳಾ ಅಧಿಕಾರಿಯೊಬ್ಬರ ನೆರವು ದೊರೆಯಲಿದೆ. ವಿವಾಹಿತ ಹೆಣ್ಣುಮಕ್ಕಳಿಗೆ ಸೋದರನ ಕಡೆಯಿಂದ ಆಭರಣ, ಉಡುಗೊರೆ ಸಿಗಲಿದೆ. ಆದಾಯ ಉತ್ತಮಗೊಳ್ಳಲಿದೆ. ಬುಧ, ಗುರು, ಶನಿ ಶುಭ ದಿನಗಳು.

**ವಿಶೇಷ ದಿನಗಳು : ದಿ. 16.12.2021ರ ಗುರುವಾರ ಹನುಮದ್ವ್ರತ.**

## ಗಿಡಮೂಲಿಕೆ ಮಾವು



ಹಣ್ಣುಗಳ ರಾಜ ಎಂದು ಕರೆಯಲ್ಪಡುವ ಮಾವಿನ ಹಣ್ಣನ್ನು ಪ್ರತಿಯೊಬ್ಬರೂ ಅದರ ವಿಶಿಷ್ಟ ಹುಳಿ ಮಿಶ್ರಿತ ಸಿಹಿಯ ರುಚಿಗಾಗಿ ಇಷ್ಟ ಪಡುತ್ತಾರೆ. ಆದರೆ, ರುಚಿಯ ಜೊತೆ ಅದರಲ್ಲಿ ಔಷಧೀಯ ಗುಣಗಳೂ ಇವೆ. ಹಣ್ಣುಗಳು ಕೆಲವೇ ತಿಂಗಳುಗಳು ದೊರೆತರೂ ಮಾವಿನ ಎಲೆಗಳು, ತೊಗಟೆ ವರ್ಷವಿಡೀ ದೊರೆಯುತ್ತವೆ. ಇವುಗಳನ್ನು ಸರಿಯಾಗಿ ಬಳಕೆ ಮಾಡಬೇಕು. ತಾಜಾ ಮಾವಿನ ಹಣ್ಣುಗಳಿಂದ ರಕ್ತದ ಒತ್ತಡ ನಿರ್ವಹಣೆಯಾಗುತ್ತದೆ ಮತ್ತು ಮಧುಮೇಹ ಸಮಸ್ಯೆ ಕೂಡ ಸಹಜ ಸ್ಥಿತಿಯಲ್ಲಿ ಉಳಿಯುತ್ತದೆ.

ಹಸಿ ಮಾವಿನಕಾಯಿಯ ರಸ ಮೊಡವೆಗಳಿಗೆ ರಾಮಬಾಣವಾಗಿದೆ. ಮಾವಿನ ಹಣ್ಣುಗಳಲ್ಲಿ ವಿಟಮಿನ್ 'ಎ' ಪ್ರಮಾಣ, ಪೊಟ್ಯಾಸಿಯಂ ಅಂಶ ಮತ್ತು ಆಂಟಿ ಆಕ್ಸಿಡೆಂಟ್ ಅಂಶಗಳು ಇರುವುದರಿಂದ ಕಣ್ಣಿಗೆ ಒಳ್ಳೆಯದು. ಮಾವಿನ ಎಲೆಗಳಲ್ಲಿ ಹೆಚ್ಚಿನ ಪ್ರಮಾಣದ ನಾರಿನ ಅಂಶ, ವಿಟಮಿನ್ 'ಸಿ' ಅಂಶ ಮತ್ತು ಪೆಕ್ಟಿನ್ ಅಂಶ ಇರುವುದರಿಂದ ಕೊಲೆಸ್ಟ್ರಾಲ್ ಮಟ್ಟ ತಗ್ಗಿಸಲು ಎಲೆಗಳ ಕಷಾಯ ಸೇವನೆ ಮಾಡಬಹುದು. ಮಾವಿನ ವಾಟೆ ಅಥವಾ ಮಾವಿನ ಹಸಿ ಎಲೆಯ ರಸವನ್ನು ಸೇವಿಸಿದರೆ ಅತಿಸಾರ ಭೇದಿ ವಾಸಿ ಆಗುತ್ತೆ.

ಮಾವಿನ ಮರದ ತೊಗಟೆಯ ಕಷಾಯವನ್ನು ಬಾಯಲ್ಲಿ ಮುಕ್ಕಳಿಸುವುದರಿಂದ ಒಸಡುಗಳ ಸಮಸ್ಯೆ ದೂರ ಆಗುತ್ತದೆ. ಬಾಯಿಯ ದುರ್ಗಂಧ ಹಾಗೂ ಹಲ್ಲು ನೋವನ್ನು ದೂರ ಮಾಡುತ್ತದೆ. ಮರದ ಚಕ್ಕೆಯ ಕಷಾಯವು ರಕ್ತ ಮೂಲವ್ಯಾಧಿ, ಉರಿ ಮೂತ್ರ ಹಾಗೂ ಲೈಂಗಿಕ ರೋಗಗಳನ್ನು ಗುಣಪಡಿಸಲು ಸಹಕಾರಿಯಾಗಿದೆ.

ಮಾವಿನ ವಾಟೆಯ ಒಳಭಾಗವೂ ಸಹ ಮನೆ ಮದ್ದಾಗಿ ಬಳಸಲ್ಪಡುತ್ತದೆ. ಸುಟ್ಟ ಗಾಯಗಳಿಗೆ, ಚೇಳು ಕಡಿತಕ್ಕೆ ವಾಟೆಯನ್ನು ಗಂಧದಂತೆ ತೇಯ್ದು ಲೇಪಿಸಿದರೆ ಉರಿ ಕಡಿಮೆಯಾಗುತ್ತದೆ. ವಾಟೆಯಿಂದ ತೈಲ ತಯಾರಿಸಿ ಕೀಲು, ಸಂಧಿಗಂಟು ನೋವುಗಳಿಗೆ ಮಸಾಜ್ ಮಾಡಲು ಬಳಸುತ್ತಾರೆ.


ಮಾವಿನ ಮರದ ತೊಗಟೆಯಿಂದ ಸೋರುವ ಅಂಟನ್ನು ಹಚ್ಚುವುದರಿಂದ ಒಡೆದಿರುವ ಹಿಮ್ಮಡಿ ಮೆತ್ತಗಾಗುತ್ತವೆ. ಇದರ ಎಲೆ, ಕಡ್ಡಿಗಳಿಂದ ಹಲ್ಲು ಉಜ್ಜುವುದು ಪದ್ಧತಿಯಾಗಿದೆ. ಗಿಡದಲ್ಲಿಯೇ ಹಣ್ಣಾದ ಎಲೆಗಳಿಂದ ಚಹಾ ತಯಾರಿಸಿ ಸೇವಿಸಿದರೆ ಚೈತನ್ಯ ದಾಯಕವಾಗಿರುತ್ತದೆ. ಒಣಗಿದ ಎಲೆಗಳನ್ನು ನುಣ್ಣಗೆ ಪುಡಿ ಮಾಡಿ ಸಣ್ಣ ಪುಟ್ಟ ಗಾಯದ ಮೇಲೆ ಉದುರಿಸಿದರೆ ಸುಲಭವಾಗಿ ವಾಸಿಯಾಗುತ್ತದೆ. ನಮ್ಮ ಹಿರಿಯರಿಗೆ ವೈದ್ಯಕೀಯ ಜ್ಞಾನ ಅದ್ಭುತವಾಗಿತ್ತು. ಅವರು ಈ ಉದ್ದೇಶಕ್ಕಾಗಿಯೇ ಹಬ್ಬ ಹರಿದಿನಗಳಲ್ಲಿ ಮಾವಿನ ಎಲೆಗಳನ್ನು ತೋರಣಕ್ಕಾಗಿ ಬಳಸುತ್ತಿದುದು. ಅಲಂಕಾರಕ್ಕಾಗಿಯೂ ಆಗುತ್ತದೆ, ಪೂಜೆಗೂ ಆಗುತ್ತದೆ, ಔಷಧಿಗೂ ಆಗುತ್ತದೆ ಎಂಬ ಅವರ ಆಲೋಚನೆ ಅದ್ವಿತೀಯ.

ಆದರೆ, ಕೆಲವರಿಗೆ ಮಾವಿನ ಹಣ್ಣುಗಳು ಚರ್ಮದ ಅಲರ್ಜಿ, ಅಜೀರ್ಣ ಸಮಸ್ಯೆ ಉಂಟು ಮಾಡುತ್ತವೆ. ತಿಳಿದುಕೊಂಡು ಉಪಯೋಗಿಸಬೇಕು. ಮಾವಿನಹಣ್ಣು ತಿಂದ ಮೇಲೆ ತಕ್ಷಣ ನೀರು ಕುಡಿಯಬಾರದು ಹಾಗೂ ಮಳೆ ಆಗುವವರೆಗೂ ಮಾವಿನ ಹಣ್ಣು ತಿನ್ನಬಾರದು. ಪೌಡರ್ ಹಾಕಿ ಹಣ್ಣು ಮಾಡಿದವುಗಳಿಗಿಂತ ಮರದಲ್ಲಿಯೇ ಹಣ್ಣಾದವು ಆರೋಗ್ಯಕ್ಕೆ ಉತ್ತಮ.

**- ಮಮತಾ ನಾಗರಾಜ್,**
ಪಾರಂಪರಿಕ ವೈದ್ಯರು, ದಾವಣಗೆರೆ.

## ಪದವಾಣಿ-04

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**
1) ಕೊಡುವ ಲೆಕ್ಕ 4
3) ಶ್ರೀರಾಮನ ಬಂಟ 4
5) ಕೈಯಲ್ಲೇ ವಶವಾದದ್ದು 4
6) ದಾರಿಯಲ್ಲಿ ಸಿಕ್ಕ ಅಪ್ಪಣೆ ಚೀಟಿ 4
7) ಜೇನಿನಂತಹ ತಿಂಗಳು 4
9) ಸುಂದರವಾಗಿರುವ ಭೂಮಿ 4
11) ಯತಿಗೆ ದೊರೆತ ಕಡಿತ 4
12) ರಾತ್ರಿಯಲ್ಲಿ ಸಂಚರಿಸುವವ 4

**ಮೇಲಿನಿಂದ ಕೆಳಕ್ಕೆ :**
1) ಸಂಶೋಧನೆ ಮಾಡುವವ 4
2) ಹೊಚ್ಚ ಹೊಸದಾದ ಬೆಣ್ಣೆ 4
3) ವಿಷ್ಣು-ಶಿವ ಒಟ್ಟಾಗಿರುವ ಊರು 4
4) ತರ ತರದ ಕಾಯಿ ಪಲ್ಲೆ 4
7) ಕೊಬ್ಬಿದ ಆನೆ 4
8) ದಂಪತಿಗಳು ಜೊತೆಯಾಗಿದ್ದಾರೆ 4
9) ವರನಿಗೆ ಇರುವ ಆದಾಯ 4
10) ಸೂರ್ಯನ ದಿನ 4

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 02ರ ಉತ್ತರಗಳು :**
ಎಡದಿಂದ ಬಲಕ್ಕೆ : 5) ಜಯಕಾರ 7) ಸುಭಾಷಿತ 13) ಸಮಗಾರ 15) ಕವಿಕರ
ಮೇಲಿನಿಂದ ಕೆಳಕ್ಕೆ : 1) ಕಟಾಂಜನ 2) ಸಮರ 3) ಹರಸು 4) ಗೆಳೆತನ 6) ಕಾಫಿ 8) ಭಾರ 9) ಮಸಲತ್ತು 10) ಗಂಗಾ 11) ವೈನಿ 12) ಮರಕತ 14) ರಮೇಶ 15) ಕನಕ.

# ಮೊಬೈಲ್ ಬಿಟ್ಟು ಪುಸ್ತಕ ಓದುವುದನ್ನು ಕಲಿಯಿರಿ



**ಮಲೇಬೆನ್ನೂರು**

ಮಲೇಬೆನ್ನೂರು, ಡಿ.11- ಮಕ್ಕಳು ಮೊಬೈಲ್ ನೋಡುವು ದನ್ನು ಬಿಟ್ಟು ಪುಸ್ತಕಗಳನ್ನು, ಪತ್ರಿಕೆಗಳನ್ನು ಓದಿ ಬುದ್ಧಿವಂತ ರಾಗಿರಿ ಎಂದು ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕ ಹನುಮಂತಪ್ಪ ಮುದ್ದೇರ್ ಹೇಳಿದರು.

ನಂದಿಗುಡಿ, ಗೋವಿನಹಾಳ್ ಮಟ್ಟಿ ಕ್ಯಾಂಪ್, ಹಳ್ಳಿಹಾಳ್ ಕ್ಯಾಂಪ್ ಸರ್ಕಾರಿ ಶಾಲೆಗಳ ಮಕ್ಕಳಿಗೆ ಬೆಂಗಳೂರಿನ ಯೂತ್ ಫಾರ್ ಸೇವಾ ಸಂಸ್ಥೆಯವರು ನೀಡಿದ ಪುಸ್ತಕಗಳು ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದರು .

ಕೋವಿಡ್ ಬಂದ ಮೇಲೆ ಮಕ್ಕಳು ಪುಸ್ತಕ ಓದುವುದನ್ನು ಮರೆತು, ಮೊಬೈಲ್ ನೋಡುವುದರಲ್ಲಿ ನಿರತರಾಗಿದ್ದಾರೆ. ಈಗ ಶಾಲೆಗಳು ಪ್ರಾರಂಭವಾಗಿವೆ. ಆದುದರಿಂದ ಪುಸ್ತಕಗಳನ್ನು ಓದುವುದರ ಕಡೆಗೆ ಗಮನ ಹರಿಸಿ ಎಂದು ಹೇಳಿದರು.

ಸಮೂಹ ಸಂಪನ್ಮೂಲ ವ್ಯಕ್ತಿ ಬಸವರಾಜಯ್ಯ ಮಾತನಾಡಿ, ಮಕ್ಕಳು ಭವ್ಯ ನಾಡಿನ ಇತಿಹಾಸ ಉಳಿಸುವವರು ಹಾಗೂ ನಿರ್ಮಿಸುವವರು ಆಗಿದ್ದಾರೆ. ದೇಶದ ಸ್ವಾತಂತ್ರ್ಯ, ಸ್ವಾಭಿಮಾನ, ಶೌರ್ಯ, ಕಲೆಗಳನ್ನು ಉಳಿಸುವ ಮಕ್ಕಳೇ ನಮ್ಮ ಮುಂದಿನ ಭವಿಷ್ಯದ ಭರವಸೆಗಳು ಎಂದು ಅಭಿಪ್ರಾಯಪಟ್ಟರು,

ಶಿಕ್ಷಕ ಶರಣ್ ಕುಮಾರ್ ಹೆಗಡೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಚನ್ನಬಸಪ್ಪ, ಕಚೇರಿಯ ಸಿಬ್ಬಂದಿ ಐಇಆರ್‌ಟಿ ಮಲ್ಲೇಶಪ್ಪ. ಶಿಕ್ಷಕ ಪೀರು ನಾಯಕ್, ಅನುರಾಧ ಗೌಡರ್. ಪ್ರಭು ಪ್ರಸಾದ್ ತೇಲ್ಕರ್ ಹಾಗೂ ಮಕ್ಕಳು ಹಾಜರಿದ್ದರು.

# ಡಾ. ಈಶ್ವರ ಮಂಟೂರ ನಿಧನಕ್ಕೆ ಪಂಡಿತಾರಾಧ್ಯ ಶ್ರೀಗಳ ಸಂತಾಪ

ಸಾಣೇಹಳ್ಳಿ, ಡಿ.11- ಶರಣ ತತ್ವಾನುಯಾಯಿ, ಪ್ರವಚನಕಾರ, ಕವಿ, ಚಿಂತಕ ಡಾ. ಈಶ್ವರ ಮಂಟೂರ ಅವರು ಹೃದಯಾಘಾತದಿಂದ ನಿಧನರಾದ ವಾರ್ತೆ ಕೇಳಿ ಬರಸಿಡಿಲೆರಗಿದಂತಾಯ್ತು. ಸಂಸಾರಿಯಾಗಿ ದ್ದುಕೊಂಡೇ ಬಸವಾದಿ ಶಿವಶರಣರ ತತ್ವ, ಸಿದ್ಧಾಂತಗಳನ್ನು ಅಪ್ಪಿಕೊಂಡು ಅದರಂತೆ ನಡೆಯಲೆತ್ನಿಸುತ್ತಿದ್ದ ಅಪರೂಪದ ವ್ಯಕ್ತಿತ್ವ ಅವರದು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸ್ಮರಿಸಿ, ಸಂತಾಪ ಸೂಚಿಸಿದ್ದಾರೆ.

ಮಂಟೂರ ಅವರ ಆಶ್ರಮಕ್ಕೆ ಹೋಗಿ ಅವರ ಈ ಎಲ್ಲ ಸಾಧನೆಗಳನ್ನು ನೋಡಿ ಸಂತೋಷವಾಗಿತ್ತು. ದುಬೈ ಹಾಗೂ ಕರ್ನಾಟಕದ ಹಲವಾರು ಸಮಾರಂಭಗಳಲ್ಲಿ ನಮ್ಮೊಂದಿಗೆ ಭಾಗವಹಿಸಿದ್ದರು. ನಾವು ಆಯೋಜಿಸಿದ್ದ ಶ್ರಾವಣ ಸಂಜೆ, ಮತ್ತೆ ಕಲ್ಯಾಣ ಹಾಗೂ ಸಾಣೇಹಳ್ಳಿಯ ನಾಟಕೋತ್ಸವ, ವರ್ಷದ ಹರ್ಷ ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದರು ಎಂದು ಸ್ವಾಮೀಜಿ ದುಃಖ ವ್ಯಕ್ತಪಡಿಸಿದ್ದಾರೆ.

# ನಗರದಲ್ಲಿ ಇಂದು ಕಲಾಕುಂಚದ ಶಾಖೆ ಉದ್ಘಾಟನೆ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಎಂ.ಸಿ.ಸಿ.'ಎ' ಮತ್ತು 'ಬಿ' ಬ್ಲಾಕ್ ಶಾಖೆಗಳ ಉದ್ಘಾಟನಾ ಕಾರ್ಯಕ್ರಮವು ಇಂದು ಸಂಜೆ 5 ಗಂಟೆಗೆ ಎಂಸಿಸಿ 'ಎ' ಬ್ಲಾಕ್ ಶ್ರೇಯಸ್ ನಿಲಯದಲ್ಲಿ ನಡೆಯಲಿದೆ ಎಂದು ನೂತನ ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶೈಲಾ ವಿನೋದ್ ದೇವರಾಜ್ ತಿಳಿಸಿದ್ದಾರೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್ ಭಾಗವಹಿಸಲಿದ್ದಾರೆ. ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ. ಜ್ಯೋತಿ ಗಣೇಶ್ ಶೆಣೈ, ನೂತನ ಶಾಖೆಯ ಅಧ್ಯಕ್ಷರಾದ ಪ್ರಭಾ ರವೀಂದ್ರ, ಖಜಾಂಚಿ ಗೀತಾ ಬದರಿನಾಥ್ ಉಪಸ್ಥಿತರಿರುವರು ಎಂದು ಶ್ರೀಮತಿ ಚಂದ್ರಶೇಖರ ಅಡಿಗ ತಿಳಿಸಿದ್ದಾರೆ.

# ಸಿದ್ಧಗಂಗಾ ಸಂಸ್ಥೆಯಿಂದ ಶಿಬಿರ - ನಡಿಗೆ ಚಟುವಟಿಕೆ



ದಾವಣಗೆರೆ, ಡಿ.11- ಭಾರತ್ ಸ್ಕಾಟ್ಸ್ ಮತ್ತು ಗೈಡ್ಸ್‌ನ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ ಮಕ್ಕಳು ರಾಜ್ಯ ಪುರಸ್ಕಾರ ಪರೀಕ್ಷಾರ್ಥವಾಗಿ ದಾವಣಗೆರೆಯಿಂದ ಹದಡಿಯವರೆಗೆ ಕಾಲ್ನಡಿಗೆ ಚಟುವಟಿಕೆ ನಡೆಸಿದರು. 25 ಸ್ಕೌಟ್ಸ್ ಮತ್ತು 25 ಗೈಡ್ಸ್ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸಿದ್ದರು.

ಹದಡಿಯ ವಿನಾಯಕ ಶಾಲೆಯಲ್ಲಿ ಧ್ವಜಾರೋಹಣ ನೆರವೇರಿಸಿ ವಿವಿಧ ರೀತಿಯ ಗಂಟುಗಳನ್ನು ಪರಿಚಯ ಮಾಡಿಕೊಂಡರು. ಅಡುಗೆ ಮಾಡಿದ ಮಕ್ಕಳು ಊಟದ ನಂತರ ಶಿಬಿರಾಗ್ನಿ ಕಾರ್ಯಕ್ರಮ ನಡೆಸಿಕೊಟ್ಟರು. ಶಾಲೆಯ ಕಾರ್ಯದರ್ಶಿ ಜಿ. ಹೆಚ್. ಬಸವರಾಜಪ್ಪ, ಮಕ್ಕಳ ಶಿಸ್ತು ಮತ್ತು ಸ್ವಯಂಪಾಕ ಹಾಗೂ ಶಿಬಿರಾಗ್ನಿ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಮಕ್ಕಳ ಜೊತೆಗೆ ಸಿದ್ಧಗಂಗಾ ಶಾಲೆಯ ಸ್ಕೌಟರ್ ಶ್ರೀನಿವಾಸ್, ಲೇಡಿ ಸ್ಕೌಟ್ ಮಾಸ್ಟರ್ ಆರೋಗ್ಯಮ್ಮ, ಗೈಡ್‌ನ ಲೀಡರ್ ಟ್ರೈನರ್ ಶಶಿಕಲಾ, ಗೈಡ್ ಕ್ಯಾಪ್ಟನ್‌ಗಳಾದ ವೇದಾವತಿ, ನಿರ್ಮಲ, ಮಂಜುಳ ಇವರಿದ್ದರು.

ಇದೇ ಸಂದರ್ಭದಲ್ಲಿ ಹದಡಿ ಪೊಲೀಸ್ ಠಾಣೆ ವತಿಯಿಂದ ಸಬ್ ಇನ್ಸ್‌ಪೆಕ್ಟರ್ ರೂಪ ತೆಂಬದ್ ಅವರ ನೇತೃತ್ವದಲ್ಲಿ ಅಪರಾಧ ತಡೆ ಮಾಸಾಚರಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಪ್ರಾರಂಭದಲ್ಲಿ ಸಿದ್ಧಗಂಗಾ ಸಂಸ್ಥೆ ಅಧ್ಯಕ್ಷೆ ಜಸ್ಟಿನ್ ಡಿ'ಸೌಜ ಹಸಿರು ಬಾವುಟ ತೋರಿಸಿದರು. ಗೈಡ್ಸ್‌ನ ಸಹಾಯಕ ಆಯುಕ್ತರಾದ ರೇಖಾರಾಣಿ ಶುಭ ಕೋರಿದರು.

# ಗಾಯಕ ರಾಜೇಶ್ ಕೃಷ್ಣನ್‌ಗೆ ಸನ್ಮಾನ



**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ. 11- ನಗರದ ಶನೇಶ್ವರ ಮಂದಿರದಲ್ಲಿ ಲೋಕಕಲ್ಯಾಣಾರ್ಥ ಮತ್ತು ಪ್ರದೇಶ ಅಭಿವೃದ್ಧಿಗಾಗಿ ಎರಡು ಮಹಾಮಂಡಲಗಳ ಕಾಲ ನಡೆದಿರುವ ಶ್ರೀ ಮಹಾಮೃತ್ಯುಂಜಯ ಜಪ, ಯಾಗ, ದೀಪ ದುರ್ಗಾ ನಮಸ್ಕಾರ, ಹವನ, ಭದ್ರಕಾಳಿ ಸಮೇತ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ, ಧರ್ಮ ಸಮಾರಂಭದ ಕೊನೆಯ ದಿನದ ಕಾರ್ಯಕ್ರಮ ಸಂಗೀತ ಸಂಜೆಯಲ್ಲಿ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ರವೀಂದ್ರಗೌಡ ಎಫ್. ಪಾಟೀಲ, ಕೊಟ್ರೇಶ ದಾವಣಗೆರೆ, ದಿಳ್ಳೆಪ್ಪ ಸತ್ಯಪ್ಪನವರ, ಮರಡೆಪ್ಪ ಚಳಗೇರಿ ಉಪಸ್ಥಿತರಿದ್ದರು.

# ಧೂಳೆಹೊಳೆ ಸ.ಹಿ.ಪ್ರಾ. ಶಾಲೆಗೆ ಧ್ವನಿವರ್ಧಕ, ಲ್ಯಾಪ್‌ಟಾಪ್ ಕೊಡುಗೆ



ಮಲೇಬೆನ್ನೂರು, ಡಿ.11- ಧೂಳೆಹೊಳೆ ಗ್ರಾಮದ ಸರ್ಕಾರಿ ಹಿ.ಪ್ರಾ. ಶಾಲೆಗೆ ಗ್ರಾಮದ ಹಿರಿಯರಾದ ಸಿದ್ದಪ್ಪ ಕುಂಚೂರು ಅವರು 18 ಸಾವಿರ ರೂ. ಮೌಲ್ಯದ ಧ್ವನಿವರ್ಧಕ ಹಾಗೂ ಉಮೇಶ್ ಕುಂಚೂರು ಅವರು 30 ಸಾವಿರ ರೂ.ಗಳ ಲ್ಯಾಪ್ ಟಾಪ್ ಕೊಡುಗೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ತೀರ್ಥಪ್ಪ ಹಾಗೂ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಚನ್ನಕೇಶವ ಕಟ್ಟಿ, ರಾಜ್ಯ ಸರ್ಕಾರಿ ನೌಕರರ ಸಂಘದ ಹರಿಹರ ಘಟಕದ ಪ್ರಧಾನ ಕಾರ್ಯದರ್ಶಿ ಡಿ.ಟಿ. ಮಂಜಪ್ಪ, ಗ್ರಾಮದ ನಿವೃತ್ತ ಶಿಕ್ಷಕ ಎಸ್. ನಿಜಲಿಂಗಪ್ಪ, ವಿರೂಪಾಕ್ಷಪ್ಪ ಗೌಡರ್ ಅವರನ್ನು ಸನ್ಮಾನಿಸಲಾಯಿತು.

ಮುಖ್ಯ ಶಿಕ್ಷಕ ಈ. ಬಸವರಾಜಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಎಸ್. ನಿಜಲಿಂಗಪ್ಪ, ದಾನಿಗಳಾದ ಸಿದ್ದಪ್ಪ ಕುಂಚೂರ್, ಉಮೇಶಪ್ಪ ಕುಂಚೂರ್, ಗ್ರಾಮದ ಹಿರಿಯರಾದ ಡಿ.ಕೆ. ಹಾಲನಗೌಡ, ಕೆ.ಜಿ. ಶಿವಣ್ಣ, ತಿಪ್ಪಣ್ಣಗೌಡ್ರು, ಉಮೇಶಪ್ಪ, ರಾಮನಗೌಡ್ರು, ಜಿ. ಮಲ್ಲಿಕಾರ್ಜುನ, ಶಿವಮೂರ್ತಪ್ಪ, ಶಿಕ್ಷಕರಾದ ಶರಣ್‌ಕುಮಾರ್ ಹೆಗಡೆ, ಉಮೇಶಯ್ಯ, ಮಂಗಳ, ಲೈಕಬಾನು, ಹೇಮ, ರಶ್ಮಿ ಸೌಮ್ಯ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ, ಎಸ್.ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್‌ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ, ಕೆಆರ್ ರಸ್ತೆ, ಗಡಿಯಾರ ಕಂಬ, ಬಿಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪಭಾಗ, ವಸಂತ ಟಾಕೀಸ್ ಭಾಗದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಉಸಿರು ನಿಂತರೂ ಹೆಸರು ಉಳಿಯಲು ಪುನೀತ್ ಪ್ರೇರಣೆ

**ಪುನೀತ್ ಗಾನ ನಮನ ಕಾರ್ಯಕ್ರಮದಲ್ಲಿ ಬಸವಪ್ರಭು ಸ್ವಾಮೀಜಿ**



ದಾವಣಗೆರೆ, ಡಿ.11- ಮಾನವನ ಜೀವನ ಒಂದು ದಿನ ಮಣ್ಣಲ್ಲಿ ಮಣ್ಣಾಗಿ ನಶ್ವರವಾಗುವುದು. ಆದರೆ ನಮ್ಮ ಉಸಿರು ನಿಂತರೂ ಹೆಸರು ಚಿರವಾಗಿ ಉಳಿಯುವಂತಹ ಸಮಾಜ ಮುಖಿ ಕಾರ್ಯಗಳನ್ನು ಮಾಡಬೇಕು ಎಂದು ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದರು.

ಅವರು, ನಗರದ ಶಿವ ಯೋಗಾಶ್ರಮದಲ್ಲಿ ಸಂಕಲ್ಪ ಸೇವಾ ಫೌಂಡೇ ಷನ್ ವತಿಯಿಂದ ಪುನೀತ್ ಗಾನ ನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮನುಷ್ಯನ ಜೀವನದಲ್ಲಿ ಸಾವು ಗೊತ್ತಿಲ್ಲ. ತಂತ್ರಜ್ಞಾನದ ಮುಖೇನ ತಾಂತ್ರಿಕ ಬದುಕಿನ ಕ್ರಾಂತಿ ಮಾಡಲಾಗಿದೆ. ಆದರೆ ಮನುಷ್ಯನ ಸಾವು ಯಾವಾಗ ಎಂಬುದನ್ನು ಕಂಡು ಹಿಡಿಯಲು ಆಗಿಲ್ಲ, ಆಗುವುದೂ ಇಲ್ಲ. ಅದು ಸೃಷ್ಠಿ ಮತ್ತು ದೇವರ ನಿಯಮ. ಪ್ರತಿಯೊಬ್ಬರಿಗೂ ದೇವರು ಆಯಸ್ಸು ಬರೆದಿದ್ದಾನೆ. ಹುಟ್ಟಿ ಬಂದ ಮೇಲೆ ಹೆಸರು ಉಳಿಯುವಂತಹ ಕೆಲಸ ಮಾಡಬೇಕು ಎಂದು ಹೇಳಿದರು.

ಪುನೀತ್ ರಾಜ್ ಕುಮಾರ್ ಉಸಿರು ಇಲ್ಲದಿದ್ದರೂ ಹೆಸರು ಉಳಿಯುವಂತಹ ಕಾರ್ಯ ಮಾಡಿದ ಕಾರಣ ಜನಮಾನಸದಲ್ಲಿ ಚಿರವಾಗಿ ಉಳಿದಿದ್ದಾರೆ ಎಂದರು.

ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪುನೀತ್ ರಾಜ್ ಕುಮಾರ್ ಮೇರು ನಟನಾಗಿ, ಪವರ್ ಸ್ಟಾರ್ ಆಗಿ ಮಿಂಚಿ ತನ್ನ ಸಾಮಾಜಿಕ ಸೇವಾ ಕಾರ್ಯಗಳ ಮುಖೇನ ಬೇರೆ ರಾಜ್ಯದಲ್ಲೂ ಹೆಸರು ವಾಸಿಯಾದ ಕರ್ನಾಟಕದ ಏಕೈಕ ನಟ. ನಾನು ಸಹ ಪುನೀತ್ ಅಗಲಿಕೆಯ ವೇಳೆ ಅವರ ಅಂತಿಮ ದರ್ಶನಕ್ಕೆ ಹೋದಾಗ, ಅಷ್ಟೊಂದು ಜನ ಸಂದಣಿಯನ್ನು ನೋಡಿ ಬೆರಗಾದೆ. ಅವರ ಮೇಲೆ ಜನರಿಗಿರುವ ಗೌರವ, ಪ್ರೀತಿಗೆ ಸಾಕ್ಷಿಯಾಗಿತ್ತು. ಎಲ್ಲೂ ಹೇಳದೇ ತಾವು ಮಾಡಿದ ಧಾನ, ಧರ್ಮವು ಅವರಲ್ಲಿದ್ದ ಸಮಾಜಮುಖಿ ಚಿಂತನೆಗೆ ಹಿಡಿದ ಕೈಗನ್ನಡಿಯಾಗಿದ್ದವು ಎಂದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿದರು.

ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಸದಸ್ಯರಾದ ಸೋಗಿ ಶಾಂತ್ ಕುಮಾರ್, ಶಿವಪ್ರಸಾದ್, ಸಂಕಲ್ಪ ಸೇವಾ ಫೌಂಡೇಷನ್ ಅಧ್ಯಕ್ಷ ಜಿ. ಮಹಾಂತೇಶ್, ಕಾರ್ಯದರ್ಶಿ ಅನಿಲ್ ರಾಯ್ಕರ್, ವಾಸುದೇವ್ ರಾಯ್ಕರ್, ನರೇಂದ್ರ ಕುಮಾರ್, ಎನ್. ಬಕ್ಕೇಶ್, ಮುರುಗೇಶ್, ಗಜಪತಿ, ವಿಕಾಸ್, ಯೋಗ ಗುರು ಕರಿಬಸಪ್ಪ, ಪ್ರಕಾಶ್ ಉತ್ತಂಗಿ, ಡಾ. ಮಂಜುನಾಥ್, ಮಲ್ಲಿಕಾರ್ಜುನ್, ಜಯಣ್ಣ ಬಾದಾಮಿ ಸೇರಿದಂತೆ ಇತರರು ಇದ್ದರು.

# ವರ್ತಕರಲ್ಲಿ ಪ್ರಜ್ವಲಿಸುತ್ತಿರುವ ಕನ್ನಡಾಭಿಮಾನ

## ಎಪಿಎಂಸಿ ಅಡಿಕೆ ವರ್ತಕರ ಸನ್ಮಾನ ಸಮಾರಂಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ವಾಮದೇವಪ್ಪ ಸಂತಸ



ದಾವಣಗೆರೆ, ಡಿ. 11 - ಅಡಿಕೆ ವರ್ತಕರಲ್ಲಿ ಕನ್ನಡ ಅಭಿಮಾನ ಹೆಚ್ಚು ಹೆಚ್ಚು ಪ್ರಜ್ವಲಿಸುತ್ತಿರುವುದು ಅತ್ಯಂತ ಆಶಾದಾಯಕ ಮತ್ತು ಪ್ರೋತ್ಸಾಹದಾಯಕ ಬೆಳವಣಿಗೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ನಾವು-ನೀವು ಎಲ್ಲರೂ ಸೇರಿ ಜಿಲ್ಲಾದ್ಯಂತ ಕನ್ನಡ ರಥವನ್ನು ಅರ್ಥಪೂರ್ಣವಾಗಿ ಎಳೆಯೋಣ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ನಗರದ ತಾಲ್ಲೂಕು ಕಛೇರಿ ಪಕ್ಕದಲ್ಲಿರುವ ಎಪಿಎಂಸಿ ಅಡಿಕೆ ಮಂಡಿಯ ಶ್ರೀ ನಂದಿ ಸಿಂಡಿಕೇಟ್, ಅಡಿಕೆ ದಲ್ಲಾಲರು ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ವರ್ತಕರಲ್ಲಿ ಒತ್ತಡಗಳು ಹೆಚ್ಚು. ಇಂತಹ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭೆ, ಸಮಾರಂಭ ಹಾಗೂ ಸಾಹಿತ್ಯದ ಕಡೆ ಗಮನ ಹರಿಸಬೇಕು. ಕನ್ನಡ ಕುವೆಂಪು ಭವನದಲ್ಲಿ ಉತ್ತಮ ಗ್ರಂಥಾಲಯವಿದೆ. ಅಲ್ಲಿ ಅತ್ಯುತ್ತಮ ಪುಸ್ತಕಗಳಿವೆ. ಅವುಗಳನ್ನು ಓದಿ ಒತ್ತಡ ಕಡಿಮೆ ಮಾಡಿಕೊಳ್ಳಬಹುದು ಎಂದು ಅವರು ತಿಳಿಸಿದರು.

ಎಂ. ಬಸವರಾಜಪ್ಪ ಬೇತೂರು, ಕುಕ್ಕುವಾಡ ಸುರೇಂದ್ರಪ್ಪ, ಎಂ. ವೀರಬಸಪ್ಪ ಬೇತೂರು, ಜಿಲ್ಲಾ ಕಸಾಪ ಮಾಜಿ ನಿರ್ದೇಶಕ ಎ.ಆರ್. ಉಜ್ಜಿನಪ್ಪ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಲೋಕಿಕೆರೆ ರವಿ, ಎಂ.ಎಸ್. ಮಹೇಶ್ವರಯ್ಯ, ಬನಶಂಕರಿ ಶಂಕ್ರಣ್ಣ, ಜಮ್ಮೇನಹಳ್ಳಿ ಗುರುಮೂರ್ತಿ, ಬೆಳ್ಳುಳ್ಳಿ ಗುರುಮೂರ್ತಿ, ದೊಗ್ಗಳ್ಳಿ ಶಿವಕುಮಾರ್, ನಂದಿ ಬಸವೇಶ್ವರ ಅಶೋಕ್, ವಿಠಲಾಪುರ ಕಿರಣ್, ಯಲವಟ್ಟಿ ಅಣ್ಣಪ್ಪ, ತೊಗಲೇರಿ ಮುರುಗೇಶ್, ಮುದ್ದಲ್‌ಮಠ ವಿಶ್ವನಾಥಯ್ಯ, ಎಂ.ಆರ್. ಗೋಪಿ, ಹೂವಿನಮಡು ನಾಗರಾಜ್, ಕುಕ್ಕುವಾಡದ ಮಧು, ಬೇತೂರು ಎಂ.ಡಿ. ಸುರೇಶ್, ಎಂ.ಸಿ. ಸಂದೀಪ್ ಹಾಜರಿದ್ದರು.

ಬನಶಂಕರಿ ಸದಾನಂದ ನಿರೂಪಿಸಿದರು. ಪ್ರಾರ್ಥನೆ ಮತ್ತು ಸನ್ಮಾನಿತರ ಪರಿಚಯವನ್ನು ಎಂ. ಷಡಕ್ಷರಪ್ಪ ಬೇತೂರು ಮಾಡಿದರು. ರಾಮಗೊಂಡನಹಳ್ಳಿ ಜಯಣ್ಣ ಸ್ವಾಗತಿಸಿದರು. ಎಂ.ಬಿ. ಕಾಂತರಾಜ್ ಬೇತೂರು ವಂದಿಸಿದರು.

# ಜಗಳೂರು : ಅತಿಥಿ ಉಪನ್ಯಾಸಕರಿಂದ ಮನವಿ

ಜಗಳೂರು, ಡಿ.11- ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ತರಗತಿ ಬಹಿಷ್ಕರಿಸಿ ಅತಿಥಿ ಉಪನ್ಯಾಸಕರ ಸಂಘದ ತಾಲ್ಲೂಕು ಸಮಿತಿ ವತಿಯಿಂದ ತಹಶೀಲ್ದಾರ್ ಶಶಿಧರ್ ಸ್ವಾಮಿ ಹಾಗೂ ಶಾಸಕ ಎಸ್.ವಿ.ರಾಮಚಂದ್ರ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.



ತಾಲ್ಲೂಕು ಅಧ್ಯಕ್ಷ ವೆಂಕಟೇಶ್ ವೈ. ಮಾತನಾಡಿ, ರಾಜ್ಯವ್ಯಾಪಿ ಸರ್ಕಾರಿ ಕಾಲೇಜುಗಳಲ್ಲಿ 14 ಸಾವಿರಕ್ಕೂ ಅಧಿಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಾರ್ಷಿಕ 10 ತಿಂಗಳ ವೇತನ ಪಾವತಿಸಲಾಗುತ್ತಿದೆ. ಕೂಡಲೇ ಪ್ರತಿ ತಿಂಗಳ ಪೂರ್ಣಾವಧಿ ವೇತನ ಹಾಗೂ ಸೇವಾ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು.

ಬೇಡಿಕೆಗಳ ಈಡೇರಿಕೆಗಾಗಿ ಹಲವು ವರ್ಷಗಳಿಂದ ರಾಜ್ಯಮಟ್ಟದಲ್ಲಿ ಹೋರಾಟ ನಡೆಸಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಬೆಳಗಾವಿ ಚಳಿಗಾಲದ ಅಧಿವೇಶನದ ಅವಧಿಯಲ್ಲಿ ಅನಿರ್ದಿಷ್ಟಾವಧಿ ಧರಣಿಗೆ ಕರೆ ನೀಡಿದ್ದು, ತಾಲೂಕು ಅತಿಥಿ ಉಪನ್ಯಾಸಕರ ಸಂಘದಿಂದ ತಾತ್ಕಾಲಿಕವಾಗಿ ಬೆಂಬಲಿಸಿ, ಮನವಿ ಸಲ್ಲಿಸಲಾಗಿದೆ. ಮುಂದಿನ ವಾರದಲ್ಲಿ ಹೋರಾಟದಲ್ಲಿ ಭಾಗವಹಿಸಲಿದ್ದೇವೆ ಎಂದು ತಿಳಿಸಿದರು.

ಶಾಸಕ.ಎಸ್.ವಿ ರಾಮಚಂದ್ರ ಪ್ರತಿಕ್ರಿಯಿಸಿ, ಅಧಿವೇಶನದಲ್ಲಿ ನನ್ನ ವೈಯಕ್ತಿಕ ಪತ್ರದಲ್ಲಿ ತಮ್ಮ ಬೇಡಿಕೆ ಕುರಿತು ಬೆಂಬಲಿಸಿ, ನಮ್ಮದೇ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸುತ್ತೇನೆ ಎಂದು ಭರವಸೆ ನೀಡಿದರು.

ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ರೂಪಲಕ್ಷ್ಮಿ, ಪದಾಧಿಕಾರಿಗಳಾದ ಧನಂಜಯ್ ಪಟೇಲ್, ಜಿ.ಎಂ.ರಾಕೇಶ್, ಶಿವಣ್ಣ, ಸ್ವಾಮಿ, ಕುಮಾರ್, ಲಿಂಗೇಶ್, ಚೇತನ್, ವಸಂತಕುಮಾರ್, ಮಾದಿಹಳ್ಳಿ ಮಂಜುನಾಥ್, ಸಂದೀಪ್ ನಾಯ್ಕ, ಸೋಮಶೇಖರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ರಾಣೇಬೆನ್ನೂರು : ಮಾನವ ಹಕ್ಕುಗಳ ದಿನಾಚರಣೆಯ ಮುನ್ನಾ ದಿನವೇ ಕಾರ್ಮಿಕನಿಂದ ಒಳಚರಂಡಿ ಸ್ವಚ್ಛತೆ



ರಾಣೇಬೆನ್ನೂರು, ಡಿ. 11- ಮಾನವ ಹಕ್ಕುಗಳ ದಿನಾಚರಣೆಯ ಮುನ್ನಾ ದಿನವೇ ಕಾರ್ಮಿಕನಿಂದ ಒಳ ಚರಂಡಿ ಸ್ವಚ್ಛತಾ ಕಾರ್ಯ ಮಾಡಿಸಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಖಂಡಿಸಿದ್ದಾರೆ.

ಒಳಚರಂಡಿ ಸ್ವಚ್ಛ ಮಾಡಲು ಅಧಿಕಾರಿಯೇ ದುಡ್ಡಿನ ಆಸೆ ತೋರಿಸಿ, ಇಳಿಸಿರುವುದು ನಾಚಿಕೆಗೇಡಿನ ಸಂಗತಿ. ಇದು ಸ್ಪಷ್ಟವಾಗಿ ಮಾನವ ಹಕ್ಕು ಉಲ್ಲಂಘನೆಯಾಗಿರುವುದು ಸಾಬೀತಾಗಿದೆ. ಈ ಹಿಂದೆ 'ಮಲ ಹೊರುವ' ಪದ್ಧತಿಗೆ ಸರ್ಕಾರ ಬ್ರೇಕ್ ಹಾಕಿ, ಘಟನೆಗೆ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮ ಜರುಗಿಸಲು ಆದೇಶಿಸಿದೆ. ಈ ಮುಂದುವರೆದ ಯಾಂತ್ರೀಕರಣದ ಮಧ್ಯೆಯೂ ಅಧಿಕಾರಿಗಳು ಹಣದ ಆಸೆ ತೋರಿಸಿ ಬಡ ಕಾರ್ಮಿಕರನ್ನು ಇಂತಹ ಕೆಲಸಕ್ಕೆ ಬಳಸುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ.

ಕೂಡಲೇ ಜಿಲ್ಲಾಧಿಕಾರಿಗಳು ಪ್ರಕರಣದ ಬಗ್ಗೆ ತುರ್ತು ತನಿಖೆ ನಡೆಸಿ ಸಂಬಂಧಿಸಿದ ಅಧಿಕಾರಿ ಮತ್ತು ಗುತ್ತಿಗೆದಾರನ ಮೇಲೆ ಕ್ರಮ ಕೈಗೊಳ್ಳಬೇಕು. ಕಾರ್ಮಿಕ ನಿರೀಕ್ಷಕರು ಪಾರದರ್ಶಕ ವರದಿ ನೀಡಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಪಾಟೀಲ ಎಚ್ಚರಿಸಿದ್ದಾರೆ.

## ಚೌಡಯ್ಯದಾನಾಪುರದಲ್ಲಿ ಕಾರ್ತಿಕ

ರಾಣೇಬೆನ್ನೂರು, ಡಿ.11- ತಾಲ್ಲೂಕಿನ ಸುಕ್ಷೇತ್ರ ಚೌಡಯ್ಯದಾನಾಪುರದ ಶ್ರೀ ವೀರಭದ್ರ ದೇವರ ಕಾರ್ತಿಕೋತ್ಸವ ಇದೇ ದಿನಾಂಕ 14ರ ಮಂಗಳವಾರ ರಾತ್ರಿ 8 ಗಂಟೆಗೆ ಜರುಗುವುದು.

ಅಂದು ರಾತ್ರಿ ದಿ. ವೇ. ಮುಪ್ಪಯ್ಯಗೌಡ್ರ ವಿ. ಪಾಟೀಲ (ಆರಾಧ್ಯ ಮಠ) ಸಾ. ಕಬ್ಬೂರು ಅವರ ಸ್ಮರಣಾರ್ಥ ಮಕ್ಕಳಾದ ಮಹಾಂತಗೌಡ ಮು. ಪಾಟೀಲ, ವೀರನಗೌಡ ತಿ. ಪಾಟೀಲ, ಗದಿಗೆಪ್ಪಗೌಡ ಮು. ಪಾಟೀಲ, ಶಂಕರಗೌಡ ಮು. ಪಾಟೀಲ ಅವರು ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡಿದ್ದಾರೆ ಎಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಟ್ರಸ್ಟ್‌ನ ಅಧ್ಯಕ್ಷರಾದ ವಿದ್ಯಾಧರ ಎಸ್. ಒಡೆಯರ್ ಹಾಗೂ ಗೌರವ ಕಾರ್ಯದರ್ಶಿ ವ್ಹಿ.ಆರ್. ಅಕ್ಕೂರ ತಿಳಿಸಿದ್ದಾರೆ.

## ಕೆಟಿಜೆ ನಗರ : ನೀಲಕಂಠೇಶ್ವರ ಸ್ವಾಮಿ ಕಾರ್ತಿಕ

ದಾವಣಗೆರೆ, ಡಿ.11- ಸ್ಥಳೀಯ ಕೆ.ಟಿ.ಜೆ. ನಗರ 2ನೇ ಮೇನ್ 14ನೇ ಕ್ರಾಸ್‌ನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 13 ರ ಸೋಮವಾರ ಸಂಜೆ 7.15 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ಶ್ರೀ ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘ ತಿಳಿಸಿದೆ.

## ನಗರದ ಜಾಗೃತ ಮಹಿಳಾ ಸಂಘದಿಂದ ಮಕ್ಕಳ ದಿನಾಚರಣೆ



ದಾವಣಗೆರೆ, ಡಿ. 11- ನಗರದ ಅಂಗವಿಕಲರ ಆಶಾಕಿರಣ ಟ್ರಸ್ಟ್, ಭಾವೈಕ್ಯತಾ ವಸತಿಯುತ ಶಾಲೆಯಲ್ಲಿ ಕೌಟುಂಬಿಕ ಸಲಹಾ ಕೇಂದ್ರ ಮತ್ತು ಸ್ವಾಧಾರ ಗೃಹ, ಜಾಗೃತ ಮಹಿಳಾ ಸಂಘದ ವತಿಯಿಂದ ಮಕ್ಕಳ ದಿನಾಚರಣೆ ಆಚರಿಸಲಾಯಿತು. ಉಪಾಧ್ಯಕ್ಷರಾದ ಅಮೀರಾಬಾನು, ಸದಸ್ಯರಾದ ಆಶಾ ಕಲ್ಲನಗೌಡ್ರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆಗಳಲ್ಲಿನ ಮೂಲ ಸೌಕರ್ಯದ ಕೊರತೆಯಿಂದ ಖಾಸಗಿ ಶಾಲೆಗಳತ್ತ ಮುಖ

## ಹರಪನಹಳ್ಳಿ : ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್



ಹರಪನಹಳ್ಳಿ, ಡಿ.11 - ಟಿ.ವಿ ಮತ್ತು ಮೊಬೈಲ್‌ಗಳಿಂದ ಯುವ ಜನರು ದಿಕ್ಕು ತಪ್ಪುತಿದ್ದಾರೆ, ಪಠ್ಯ ಪುಸ್ತಕಗಳಿಗಿಂತ ಹೊರಗಿನ ಜಗತ್ತಿನಲ್ಲಿ ಕಲಿಯುವುದು ಬಹಳ ಇದೆ. ದೇವರು ಧರ್ಮದ ರಾಜಕೀಯ ವಿಚಾರದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ನೀತಿ ಪಾಠ ಕಲಿಸುತ್ತದೆ ಎಂದು ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಆಯೋಜಿಸಿದ್ದ, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ 16ನೇ ತಾಲ್ಲೂಕು ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳು ಮುಚ್ಚುವ ಹಂತದಲ್ಲಿದ್ದು, ಅವುಗಳನ್ನು ಉಳಿಸುವ ಜವಾಬ್ದಾರಿ ಯುವ ಜನತೆಯ ಮೇಲಿದೆ. ಸರ್ಕಾರಿ ಶಾಲೆಗಳಿಗೆ ಇಂದು ಮೂಲ ಸೌಕರ್ಯದ ಕೊರತೆ, ಶಿಕ್ಷಕರ ಕೊರತೆ ಉಂಟಾಗಿದ್ದರಿಂದ, ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸುವ ಮಹತ್ವದ ಕೆಲಸ ಯುವ ಜನತೆ ಮೇಲಿದೆ ಎಂದರು.

ಎಐವೈಎಫ್ ರಾಜ್ಯ ಕಾರ್ಯದರ್ಶಿ ಎಚ್.ಎಂ. ಸಂತೋಷ್ ಮಾತನಾಡಿ, ವಿದ್ಯಾರ್ಥಿಗಳ ಸಮಸ್ಯೆಗಳ ನಿವಾರಣೆಗಾಗಿ ರಾಜೀ ರಹಿತ ಹೋರಾಟ ಮಾಡಲಾಗುತ್ತದೆ. ಹರಪನಹಳ್ಳಿಗೆ ಸ್ನಾತಕೋತ್ತರ ಕೇಂದ್ರ ಮಂಜೂರಾತಿಗೆ ಎಐಎಸ್‌ಎಫ್ ಒತ್ತಾಯಿಸುತ್ತದೆ. ಎಐಎಸ್‌ಎಫ್ ಯಾವುದೇ ಜಾತಿ, ಭೇದ, ಪಂಥಗಳ ಮೇಲೆ ನಿಂತಿಲ್ಲ, ಮಾನವೀಯ ಮೌಲ್ಯಗಳ ಆಧಾರದ ಮೇಲೆ ನಿಂತಿದೆ ಎಂದು ಹೇಳಿದರು.

ಸಿಪಿಐ ತಾಲ್ಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಎಐಎಸ್ ಎಫ್ ಸಂಘಟನೆಯಲ್ಲಿ ತೊಡಗಿಸಿಕೊಂಡರೆ ಒಳ್ಳೆಯ ನಾಗರಿಕರಾಗಬಹುದು. ಈವರೆಗೂ ಜಾತಿ, ಧರ್ಮ, ಪಕ್ಷದ ಪರವಾಗಿ ಹೋರಾಟ ಮಾಡಿಲ್ಲ, ವಿದ್ಯಾರ್ಥಿಗಳ ಪರವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ ಎಂದರು.

ಎಐಎಸ್ ಎಫ್ ರಾಜ್ಯ ಕಾರ್ಯದರ್ಶಿ ಬಳಿಗಾನೂರು ಕೊಟ್ರೇಶ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ಎಚ್ .ಪರಮೇಶನಾಯ್ಕ, ಎಐಎಸ್‌ಎಫ್ ರಾಜ್ಯ ಉಪಾಧ್ಯಕ್ಷ ಚಂದ್ರನಾಯ್ಕ, ಶಾಂತರಾಜ್ ಜೈನ್, ಮುಜಿಬರ್ ರಹಿಮಾನ್, ಹಾವೇರಿ ದೊಡ್ಡ ಬಸವರಾಜ ಇತರರು ಉಪಸ್ಥಿತರಿದ್ದರು.

## ರಾಷ್ಟ್ರಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆ

ದಾವಣಗೆರೆ, ಡಿ.11- ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಡಿಸೆಂಬರ್ 24 ರಿಂದ 26 ರವರೆಗೆ ಮೂರು ದಿನಗಳ ಕಾಲ ನಡೆಯಲಿರುವ ರಾಷ್ಟ್ರಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಗೆ ರಾಜ್ಯ ಅಮೆಚೂರ್ ಪವರ್‌ಲಿಫ್ಟಿಂಗ್ ಅಸೋಸಿಯೇಷನ್‌ನ 22 ಕ್ರೀಡಾಪಟುಗಳು ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಡಿ. ಮಂಜು, ಎಂ.ಜಿ.ಆರ್. ಪಾರ್ಥಿಪ, ಮಣಿಕಂಠ, ವಿರುಪಾಕ್ಷಿ, ಫಕ್ರುದ್ದೀನ್, ಲಕ್ಷ್ಮಿಕಾಂತ್, ಹರೀಶ್, ಅಕ್ಷಯ್, ವಿನಯ್, ಕಿರಣ್, ಅಕ್ರಂ ಬಾಷಾ, ಸುಂದರ್ ಎಂ. ಖಮಿತ್ಕರ್, ಖಾಸೀಂ, ಶಾಹೀದ್ ಖಾನ್, ಜಕಣಾಚಾರಿ, ಕೆಂಚಪ್ಪ ಎಂ. ಗೌಡಪ್ಪನವರ, ಮುಕ್ತಿ, ದಿವ್ಯ, ಆಶಾ, ಕೆ. ಸ್ವಾತಿ, ಮಮತಾ, ಶ್ವೇತಾ ಆಯ್ಕೆಯಾಗಿದ್ದು, ತಂಡದ ತೀರ್ಪುಗಾರರಾಗಿ ಕೆ.ಎಸ್. ಸಾಯಿನಾಥ್, ಕೆ. ಬಸವರಾಜ್, ಎಸ್.ಹೆಚ್. ಮಂಜುನಾಥ್, ವಿರೂಪಾಕ್ಷಪ್ಪ ಭಾಗವಹಿಸಲಿದ್ದಾರೆ.

## ಯಕ್ಷರಂಗದ ಸಭೆ

ಯಕ್ಷರಂಗ ಯಕ್ಷಗಾನ ಸಂಸ್ಥೆಯ ಸಭೆಯು ಸಂಸ್ಥೆಯ ಕಚೇರಿಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಸಂಸ್ಥೆ ಅಧ್ಯಕ್ಷರಾದ ಮಲ್ಯಾಡಿ ಪ್ರಭಾಕರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

## ರಾಣೇಬೆನ್ನೂರಿನಲ್ಲಿ ಇಂದು ಜೈನ್ ಪಬ್ಲಿಕ್ ಸ್ಕೂಲ್‌ನ ಟೆಡ್‌ಎಕ್ಸ್ ಯೂತ್ ಕಾರ್ಯಕ್ರಮ

ಜೈನ್ ಪಬ್ಲಿಕ್ ಸ್ಕೂಲ್ ವತಿಯಿಂದ ಬಿಐಇಟಿಯ ಎಸ್.ಎಸ್.ಎಂ. ಆಡಿಟೋರಿಯಂನಲ್ಲಿ ಇಂದು ಸಂಜೆ 4 ಗಂಟೆಗೆ ಟೆಡ್‌ಎಕ್ಸ್ ಯೂತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸಿಆರ್‌ಎಸ್‌ಇ ಸ್ಥಾಪಕ ಡಾ. ಚೆನ್‌ರಾಜ್ ರಾಯಚಂದ್, ಗೇಮ್ ಚೇಂಜರ್ಸ್‌ನ ಯೋಗೇಶ್ ಪರ್ಮಾರ್, ಮಹಾರಾಷ್ಟ್ರದ ಎಸ್.ಐ.ಸಿ.ಎ.ಸಿ. ಸದಸ್ಯ ಫ್ರಾನ್ಸಿಸ್ ಜೋಸೆಫ್, ಕಥಾಲಯದ ಗೀತ ರಾಮಾನುಜಂ, ವಾಸ್ತುಶಿಲ್ಪಿ ಪಾರ್ತ ಕೆಂಭಾವಿ, ರಾಜ್ಯ ಸರ್ಕಾರದ ಎನ್‌ಪಿ ಕಾರ್ಯಪಡೆ ಪ್ರವೀಣ್ ಕುಮಾರ್, ಲೇಖಕ ವಿಸ್ಸು ಪೌಲ್, ಗಾಯಕಿಯರಾದ ತನುಶ್ರಿ, ಶುಭ ರಾಘವೇಂದ್ರ ಭಾಗವಹಿಸಲಿದ್ದಾರೆ.

## ಎಲೆಬೇತೂರಿನಲ್ಲಿ ನಾಳೆ ಸವಗದ್ದುಗೆ ಶ್ರೀಗಳ ಕಾರ್ತಿಕೋತ್ಸವ

ದಾವಣಗೆರೆ, ಡಿ.9 - ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಇದೇ ದಿನಾಂಕ 13ರ ಸೋಮವಾರ ನಡೆಯಲಿದೆ. ಬೆಳಿಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ , ಮಂಗಳಾರತಿ ನಡೆಯಲಿದೆ. ಸಂಜೆ 7 ಗಂಟೆಗೆ ಕಾರ್ತಿಕ ಹಚ್ಚುವುದು ಮಹಾಮಂಗಳಾರತಿ ಫಳಾರ ವಿನಿಯೋಗ ನಡೆಯಲಿದೆ.



॥ ಶ್ರೀ ಗುರು ಕರಿಬಸವೇಶ್ವರ ಪ್ರಸನ್ನ ॥

**ಶುಭ ವಿವಾಹ ಆಹ್ವಾನ ಪತ್ರಿಕೆ**

ದಿ॥ ಶ್ರೀಮತಿ ಪದ್ಮಾವತಿ ದಿ॥ ಆನಂದರಾವ್ ಆರ್. ದಿಲ್ಲಿವಾಲಾ (ಘೋರ್ಪಡೆ)
ಇವರ ಕೃಪಾಶೀರ್ವಾದದಿಂದ
ಶ್ರೀಮತಿ ಶೋಭಾ ಶ್ರೀ ಶಿವಮೂರ್ತಿ ಆನಂದರಾವ್ ದಿಲ್ಲಿವಾಲಾ (ಘೋರ್ಪಡೆ)
ಶ್ರೀ ಲಕ್ಷ್ಮೀ ನಿವಾಸ, ಶ್ರೀರಾಮ ನಗರ, ಸಾಯಿಬಾಬಾ ದೇವಸ್ಥಾನದ ಹತ್ತಿರ, ರಾಣೇಬೆನ್ನೂರು.
ಇವರು ಮಾಡುವ ವಿಜ್ಞಾಪನೆಗಳು.



ನಮ್ಮ ಸುಪುತ್ರಿ
ಚಿ॥ ಕುಂ॥ ಸೌ॥ ಅಂಜಲಿ, B.E. M.Tech
ಜೊತೆ
ಚಿ॥ ದೀಪಕ್, B.E. M.Tech



(ಶ್ರೀಮತಿ ರೂಪಾ ಶ್ರೀ ಪ್ರಭುಲಿಂಗ ಹಿತ್ತಲಮನಿ, ವಕೀಲರು, ರಾಣೇಬೆನ್ನೂರು. ಇವರ ದ್ವಿತೀಯ ಸುಪುತ್ರ)
ಇವರ ವಿವಾಹ ಮಹೋತ್ಸವವನ್ನು ಸ್ವಸ್ತಿಶ್ರೀ ಮನೃಪ ಶಾಲಿವಾಹನ ಶಕೆ, 1943ನೇ ಪ್ಲವನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ ಮಾಸ ಶುಕ್ಲಪಕ್ಷ ದಶಮಿ
**ದಿನಾಂಕ : 13.12.2021ನೇ ಸೋಮವಾರ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ಕಾರಣ ತಾವುಗಳು ಪರಿವಾರ ಸಮೇತ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ.
ತಮ್ಮ ಆಗಮನಾಭಿಲಾಷಿಗಳು : ಶ್ರೀಮತಿ ಶೋಭಾ ಶ್ರೀ ಶಿವಮೂರ್ತಿ ಆನಂದರಾವ್ ದಿಲ್ಲಿವಾಲಾ (ಘೋರ್ಪಡೆ)
ಶ್ರೀಮತಿ ಗಿರಿಜಾ ಶ್ರೀ ಅನಿಲ್ ಶಿವಮೂರ್ತಿ ದಿಲ್ಲಿವಾಲಾ (ಘೋರ್ಪಡೆ)

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


**ಸಾರ್ವಜನಿಕ ಪ್ರಕಟಣೆ**

ಈ ಕೆಳಗೆ ಸಹಿ ಮಾಡಿದ ಶ್ರೀ ಎಂ.ಕೆ.ಆರ್. ಗಣೇಶ್ ಬಿನ್ ಕೆ. ರುದ್ರಾಚಾರಿ, ಡೋರ್ ನಂ.797/8, 6ನೇ ಕ್ರಾಸ್, ಶ್ರೀ ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತ, ದಾವಣಗೆರೆ ಸಿಟಿ ವಾಸಿಯಾದ ನಾನು, ನನ್ನ ಮಾಲೀಕತ್ವದಲ್ಲಿರುವ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಿಟುವಳ್ಳಿ ಗ್ರಾಮದ ರೀ ಸರ್ವೆ ನಂ.15/2 ರಲ್ಲಿ ವಿಂಗಡಿಸಿರುವ, ದಾವಣಗೆರೆ ಸಿಟಿ, ಜಯನಗರದಲ್ಲಿ ಬರತಕ್ಕ ಸೈಟ್ ನಂ.242, ಡೋರ್ ನಂ.1127/242, ಅಳತೆ: 30 x 40 ಅಡಿವುಳ್ಳ ನಿವೇಶನಕ್ಕೆ ಸಂಬಂಧಿಸಿದ ಹಿಂದಿನ ಮಾಲೀಕರುಗಳಾದ ಶ್ರೀ ಎಂ.ಜಿ. ಸಿದ್ದೇಶಿ ಇವರು ತಾ: 27-03-1992 ರಂದು ರಿಜಿಸ್ಟರ್ ಮಾಡಿಸಿಕೊಂಡಿರುವ ಕ್ರಯಪತ್ರ ಎಸ್.ಆರ್. ನಂ.8924/1991-92 ರ ಮೂಲ ಕ್ರಯಪತ್ರವನ್ನು ಮತ್ತು ಶ್ರೀಮತಿ ರಾಜೇಶ್ವರಿ ಎಸ್. ಕಪ್ಪಾಳಿ ಇವರು ತಾ: 13-02-2003 ರಂದು ರಿಜಿಸ್ಟರ್ ಮಾಡಿಸಿಕೊಂಡಿರುವ ಕ್ರಯಪತ್ರ ಎಸ್.ಆರ್. ನಂ.10971/2002-03ರ ಮೂಲ ಕ್ರಯಪತ್ರವನ್ನು ನಾನು ತಾ: 15-11-2021ರಂದು ದಾವಣಗೆರೆ ಸಿಟಿ, ನಿಟುವಳ್ಳಿ, ಹೆಚ್.ಕೆ.ಆರ್. ಸರ್ಕಲ್ ಹತ್ತಿರ ಜೆರಾಕ್ಸ್ ಮಾಡಿಸಲು ಹೋದ ಸಂದರ್ಭದಲ್ಲಿ ಕಳೆದುಕೊಂಡಿರುತ್ತೇನೆ. ಈ ಸಂಬಂಧ ದಾವವಣಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು (Lost Report No.0108067/2021) ಸದರಿ ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ಅಂತಹವರು ಈ ಕೆಳಗಿನ ವಿಳಾಸಕ್ಕೆ ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಇಂದ, ಶ್ರೀ ಎಂ.ಕೆ.ಆರ್. ಗಣೇಶ್ ಬಿನ್ ಕೆ. ರುದ್ರಾಚಾರಿ, ಮೊ. : 94485 66638

**ಮಾನ್ಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಹಾಗೂ ಸಿ.ಜೆ.ಎಂ. ನ್ಯಾಯಾಲಯದಲ್ಲಿ, ದಾವಣಗೆರೆ**

**ಕ್ರಿಮಿನಲ್ ಮಿಸ್ ನಂ. 101/2021**

ಅರ್ಜಿದಾರರು: **ಕೆ.ಎಂ. ಬಸವರಾಜಯ್ಯ ಬಿನ್ ಲೇಟ್ ಕೆ.ಎಂ. ಪರ್ವತಯ್ಯ,** ವಯಸ್ಸು 71 ವರ್ಷ, ವಾಸ : ಡೋರ್ ನಂ.2023/27, 11ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.

**ವಿರುದ್ಧ**

ಎದುರುದಾರರು: **ಮಾನ್ಯ ತಹಶೀಲ್ದಾರ್, ದಾವಣಗೆರೆ ತಾಲ್ಲೂಕು, ದಾವಣಗೆರೆ.**

**ಸಾರ್ವಜನಿಕ ಪ್ರಕಟಣಾ ನೋಟೀಸ್**

ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನೇರ್ಲಿಗೆ ಗ್ರಾಮದಲ್ಲಿ ಅರ್ಜಿದಾರನ ತಾತ ಅಡಿವೆಯ್ಯ ಬಿನ್ ಪರ್ವತಯ್ಯ ಇವರು ದಿನಾಂಕ 20.01.1960 ರಂದು ಪೌತಿಯಾಗಿದ್ದು, ಮರಣ ವಹಿಗಳಲ್ಲಿ ಮೃತರ ಹೆಸರನ್ನು ನೋಂದಾಯಿಸಿಕೊಳ್ಳುವುದಕ್ಕಾಗಿ ಎದುರುದಾರರ ವಿರುದ್ಧ ಅರ್ಜಿದಾರರು ಸಲ್ಲಿಸಿರುವ ಪ್ರಕರಣದ ವಿಚಾರಣೆಯು ದಿನಾಂಕ 27.12.2021ರಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯದ ಸಭಾಂಗಣದಲ್ಲಿ ನಿಗದಿಪಡಿಸಲಾಗಿದ್ದು, ಆಕ್ಷೇಪಣೆದಾರರು/ತಕರಾರುದಾರರು ಇದ್ದಲ್ಲಿ ಮುದ್ದತ್ತಿನಲ್ಲಿ ಖುದ್ದು ಅಥವಾ ವಕೀಲರ ಮೂಲಕ ಕೋವಿಡ್-19 ರ ಸುರಕ್ಷಾ ನಿಯಮಾವಳಿಗಳನ್ನು ಅನುಸರಿಸಿ ಹಾಜರಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರವಾಗಿ ಅರ್ಜಿದಾರರಿಗೆ ಆದೇಶಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 10th December 2021 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಎಸ್. ನಾಗರಾಜ ಆನೆಕೊಂಡ
ಅರ್ಜಿದಾರರ ಪರ ವಕೀಲರು

ಶಿರಸ್ತೇದಾರರು,
ಹಿರಿಯ ಸಿವಿಲ್ ನ್ಯಾಯಾಧೀಶರು & ಸಿ.ಜೆ.ಎಂ. ನ್ಯಾಯಾಲಯದಲ್ಲಿ, ದಾವಣಗೆರೆ.




**ಹುಟ್ಟುಹಬ್ಬದ ಶುಭಾಶಯಗಳು**

ಕ್ರಿಯಾಶೀಲ, ದಿಟ್ಟ ಹೋರಾಟಗಾರ, ಯುವಕರ ಕಣ್ಮಣಿ, ಹಿಂದೂ ಹೃದಯ ಸಾಮ್ರಾಟ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ

**ಶ್ರೀ ರಾಜನಹಳ್ಳಿ ಶಿವಕುಮಾರ್**

ಅವರಿಗೆ ಜನ್ಮ ದಿನದ ಶುಭಾಶಯಗಳು.
ನೂರುಕಾಲ ಭಗವಂತನು ಆಯುಷ್ಯ, ಐಶ್ವರ್ಯ ನೀಡಲಿ ಎಂದು ಪ್ರಾರ್ಥಿಸುತ್ತಾ, ಶ್ರೀಯುತರು ತಮ್ಮ ರಾಜಕೀಯ ಜೀವನದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸುತ್ತೇವೆ.



ಶುಭ ಕೋರುವವರು: **ಸಂದೀಪ್ ಜೈನ್** ಆಶ್ರಯ ಸಮಿತಿ ಸದಸ್ಯರು, ಮಹಾನಗರ ಪಾಲಿಕೆ ದಾವಣಗೆರೆ

# ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ಎಸ್ಸೆಸ್ ಚಾಲನೆ



ದಾವಣಗೆರೆ, ಡಿ.11- ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ಇಂದು ಬೆಳಿಗ್ಗೆ ತಮ್ಮ ನಿವಾಸದಲ್ಲಿ ಪ್ರಾಥಮಿಕ ಸದಸ್ಯತ್ವ ಪಡೆಯುವ ಮೂಲಕ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿದ ಎಸ್ಸೆಸ್ ಅವರು ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ನಡೆಯುತ್ತಿದ್ದು, ಜಿಲ್ಲೆಯ 14 ಬ್ಲಾಕ್‌ಗಳಲ್ಲಿ 82 ಕಡೆಗಳಲ್ಲಿ ಅಭಿಯಾನ ನಡೆಸಲಾಗುತ್ತಿದೆ ಎಂದರು.

ಇಂದಿನಿಂದ ಮಾರ್ಚ್ 31 ರವರೆಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೋಂದಣಿ ನಡೆಯಲಿದ್ದು, ಪಕ್ಷದ ಎಲ್ಲಾ ಕಾರ್ಯಕರ್ತರು ಸದಸ್ಯತ್ವ ಪಡೆಯಬೇಕೆಂದು ಕರೆ ನೀಡಿದ ಅವರು ಸದಸ್ಯತ್ವ ನೋಂದಣಿಯಲ್ಲಿ ಜಿಲ್ಲೆ 3ನೇ ಸ್ಥಾನದಲ್ಲಿದೆ.

ಈ ಸಂದರ್ಭದಲ್ಲಿ ವೀಕ್ಷಕರುಗಳಾದ ಸೈಯದ್ ಅಹ್ಮದ್, ವಿಜಯಕುಮಾರ್, ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯ ಜಿ.ಎಸ್.ಮಂಜುನಾಥ್, ಅಲ್ಪಸಂಖ್ಯಾತರ ಘಟಕದ ಆರೀಫ್ ಖಾನ್, ಸಾಮಾಜಿಕ ಜಾಲತಾಣದ ಹರೀಶ್ ಕೆ.ಎಲ್. ಬಸಾಪುರ, ಎಂ.ಆರ್.ಮಾಲತೇಶ್, ಸೇವಾದಳದ ಡೋಲಿ ಚಂದ್ರು, ಅಬ್ದುಲ್ ಜಬ್ಬಾರ್, ಯುವರಾಜ್ ಮತ್ತಿತರರಿದ್ದರು.

## ನಗರಕ್ಕೆ ಇಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್

ಕೇಂದ್ರ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಭಾನುವಾರ ದಾವಣಗೆರೆ ಜಿಲ್ಲೆಗೆ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಸಚಿವ ರಾಜೀವ್ ಚಂದ್ರಶೇಖರ್ ಅವರು ಬೆಂಗಳೂರಿನಿಂದ ಹೊರಟು, 10.30 ಗಂಟೆಗೆ ನಗರಕ್ಕೆ ಆಗಮಿಸುವರು. ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ 'ಡೆಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಕಾಯ್ದೆ 2021 ಕುರಿತ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ವರ್ಚುಯಲ್ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ ರಾಜೀವ್ ಚಂದ್ರಶೇಖರ್ ಭಾಗವಹಿಸುವರು.


**SHREE VEERABHADRESHWARA CONSULTANCY SERVICES**

*CIVIL ENGINEERS AND DEVELOPERS*

# 80/18, Opp. P.J. Lodge, A.V.K. College Road, P.J. Extension, DAVANGERE-577 002.

Cell: 9916173399, 9343277422

WE OFFER THE FOLLOWING SERVICE :



✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS


## ಚನ್ನಗಿರಿಯಲ್ಲಿ ಇಂದು ಜೆ.ಹೆಚ್. ಪಟೇಲ್ ಸ್ಮರಣೋತ್ಸವ

ದಾವಣಗೆರೆ, ಡಿ.10- ಬೆಂಗಳೂರಿನ ಜೆ.ಹೆಚ್. ಪಟೇಲ್ ಪ್ರತಿಷ್ಠಾನ ಹಾಗೂ ಚನ್ನಗಿರಿಯ ಜೆ.ಹೆಚ್. ಪಟೇಲ್ ಅಭಿಮಾನಿ ಬಳಗದಿಂದ ಮಾಜಿ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಸ್ಮರಣೋತ್ಸವವು ಡಿ.12ರ ಬೆಳಗ್ಗೆ 11 ಗಂಟೆಗೆ ಚನ್ನಗಿರಿಯ ಲೋಹಿಯಾ ಭವನದಲ್ಲಿ ನಡೆಯಲಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಹೆಚ್.ಆರ್. ಬಸವರಾಜಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ನಿವೃತ್ತ ಉಪನ್ಯಾಸಕ ಎಸ್. ಅಬ್ದುಲ್ ಸುಭಾನ್ ಸಾಬ್ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ರೈತ ಸಂಘದ ಲಕ್ಷ್ಮಿ ನಾರಾಯಣ, ಕೆ.ಟಿ. ಗಂಗಾಧರ್, ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ ರವಿ ಕೃಷ್ಣರೆಡ್ಡಿ, ಜೆ.ಹೆಚ್. ಪಟೇಲ್ ಪ್ರತಿಷ್ಠಾನದ ವ್ಯವಸ್ಥಾಪಕ ಧರ್ಮದರ್ಶಿ ಮಹಿಮಾ ಜಯದೇವ ಪಟೇಲ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಸಿ.ಕೆ. ಹೆಚ್. ಮಹೇಶ್ವರಪ್ಪ, ತೇಜಸ್ವಿ ವಿ. ಪಟೇಲ್ ಭಾಗವಹಿಸಲಿದ್ದಾರೆ ಎಂದು ಜೆ.ಹೆಚ್. ಪಟೇಲ್ ಅಭಿಮಾನಿ ಬಳಗದ ಗಂಗಾಧರ್ ಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೋಷ್ಠಿಯಲ್ಲಿ ಮಂಜುನಾಥ್ ಸುಗ್ಗೇರ್, ಚನ್ನಬಸಪ್ಪ, ಮಲ್ಲಮ್ಮ ಇದ್ದರು.

## 14 ರಂದು ಶ್ರೀ ಮಹಾಗಣಪತಿ ವೀರಭದ್ರೇಶ್ವರ ಸ್ವಾಮಿ ಕಡೇ ಕಾರ್ತಿಕ

ದಾವಣಗೆರೆ, ಡಿ.11 - ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದಲ್ಲಿ ಡಿ.14 ರ ಮಂಗಳವಾರ ಕಡೇ ಕಾರ್ತಿಕೋತ್ಸವ ನಡೆಯಲಿದೆ.

## ಕುರಿ, ಮೇಕೆ ಸಾಕಾಣಿಕೆ ಶಿಬಿರ

ದಾವಣಗೆರೆ, ಡಿ.10- ನಗರದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಸ್ಥಳೀಯ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಡಿ.13 ಮತ್ತು 14 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು 2 ದಿನಗಳ ತರಬೇತಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ ದೂ.ಸಂ: 08192-233787 ನ್ನು ಸಂಪರ್ಕಿಸಬಹುದೆಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.


**ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ**

**Numero Astrologer & Palmistry**



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಅರುಣ್ ಕುಮಾರ್ ಆಚಾರ್ಯ**

ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ

ಮೊಬೈಲ್ : 94481 78626, 96068 18273

ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ



**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ :

ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400

ಮೂರ್ತಿ ಜಿ.ಎಸ್.ಡಿ., ಇಂಜಿನಿಯರ್
+91 98445 69698

2ನೇ ಮೇನ್, ಪಿ.ಜೆ. ಬಡಾವಣೆ, ಸಿ.ಜಿ. ಆಸ್ಪತ್ರೆ ರಸ್ತೆ, ವಿಜಯ ಹೋಟೆಲ್ ಎದುರು, ದಾವಣಗೆರೆ-4.


## ಎಂಸಿಸಿ ಬಿ ಬ್ಲಾಕ್‌ನಲ್ಲಿ ಕಾಂಗ್ರೆಸ್ ಸದಸ್ಯತ್ವ ಅಭಿಯಾನ

ದಾವಣಗೆರೆ, ಡಿ.11- ರಾಜ್ಯದಲ್ಲಿ ಕಾಂಗ್ರೆಸ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಅದೇ ರೀತಿಯಲ್ಲಿ ನಗರದಲ್ಲೂ ಈ ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ.

ನಗರದ ಎಂಸಿಸಿ ಬಿ ಬ್ಲಾಕ್ ನ ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಅವರ ಕಚೇರಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಚಿತ್ರದುರ್ಗ - ದಾವಣಗೆರೆ ವಿಧಾನ ಪರಿಷತ್ ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ಸದಸ್ಯತ್ವ ಪಡೆಯುವ ಅಭಿಯಾನಕ್ಕೆ ಚಾಲನೆ ನೀಡಿದರು. ಇದೇ ವೇಳೆ ಹಲವರಿಗೆ ಕಾಂಗ್ರೆಸ್ ಸದಸ್ಯತ್ವ ನೀಡಲಾಯಿತು.

ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಸೋಮಶೇಖರ್ ಅವರು ಈ ಕ್ಷೇತ್ರದಲ್ಲಿ ಗೆದ್ದು ಇತಿಹಾಸ ಬರೆಯಲಿದ್ದಾರೆ.



ಜನಪರವಾಗಿ ಕೆಲಸ ಮಾಡುತ್ತಾರೆ. ಅವರನ್ನು ದುಡ್ಡಿದೆ ಎಂಬ ಕಾರಣಕ್ಕೆ ಇಲ್ಲಿಗೆ ಕರೆತಂದು ಚುನಾವಣೆಗೆ ನಿಲ್ಲಿಸಿಲ್ಲ. ಅವರ ಗೆಲುವು ನಿಶ್ಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸದಸ್ಯತ್ವ ನೋಂದಣಿ ವೇಳೆ ಕಾಂಗ್ರೆಸ್ ಮುಖಂಡರಾದ ಆಲೂರು ಜ್ಯೋತಿರ್ಲಿಂಗ, ಜಿ. ಎಸ್. ಸತೀಶ್, ಕೆ.ವಿ. ಪ್ರಮೋದ್, ಜಿ.ಎಸ್. ಮನು, ಹೆಚ್.ಎಂ. ನಿಖಿಲ್, ನೀಲಕಂಠಪ್ಪ, ಹೆಚ್. ಉಮೇಶ್, ರಘು, ಪುನೀತ್, ಪ್ರಭು ಹಾಗೂ ರಕ್ಷಿತ್ ಹಾಜರಿದ್ದರು.


**ಕರ್ನಾಟಕ ಬ್ಯಾಂಕ್ ಲಿಮಿಟೆಡ್**

ಶಾಮನೂರು ರಸ್ತೆ, ದಾವಣಗೆರೆ –577004

**ಸಾರ್ವಜನಿಕ ಹರಾಜು ಪ್ರಕಟಣೆ**

ಈ ಕೆಳಕಂಡ ವಾಹನವು ನಮ್ಮ ಬ್ಯಾಂಕ್‌ನ ಸ್ವಾಧೀನದಲ್ಲಿದ್ದು, ದಿನಾಂಕ : 22–12–2021ರಂದು ಮಧ್ಯಾಹ್ನ 3 ಗಂಟೆಗೆ ನಮ್ಮ ಶಾಖೆಯ ಕಛೇರಿಯಲ್ಲಿ ನಡೆಯುವ ಸಾರ್ವಜನಿಕ ಹರಾಜಿನಲ್ಲಿ ಈ ವಾಹನವನ್ನು ಮಾರಾಟ ಮಾಡಲಾಗುವುದು. ಬ್ಯಾಂಕಿಗೆ ಬಾಕಿ ಪಾವತಿಯಾಗಬೇಕಿರುವುದರಿಂದ ಕೆಳಕಂಡ ಷರತ್ತು ಹಾಗೂ ನಿಬಂಧನೆಗಳು ಅನ್ವಯವಾಗುತ್ತವೆ.

ವಾಹನದ ವಿವರ 2015 Make Hyundai Xcent Car 1.2-CRDI KA17-C-5058

1) ಸ್ವಾಮಿ ಯಾರ್ಡ್, ಸ.ನಂ. 200/2, ತರಳಬಾಳು ಲೇಡೀಸ್ ಹಾಸ್ಟೆಲ್ ಹತ್ತಿರ, ಹದಡಿ ರಸ್ತೆ, ದಾವಣಗೆರೆ –577005, ಮೊ : 9900263787, ಈ ವಿಳಾಸದಲ್ಲಿ ಕಛೇರಿಯ ಅವಧಿಯಲ್ಲಿ ಪೂರ್ವಾನುಮತಿ ಪಡೆದು ವಾಹನದ ಪರೀವೀಕ್ಷಣೆ ಮಾಡಬಹುದು. ಅತ್ಯಧಿಕ ಬಿಡ್ ಮಾಡುವವರಿಗೆ ವಾಹನವನ್ನು ಇದ್ದ ಸ್ಥಿತಿಯಲ್ಲಿ ಇದ್ದ ಹಾಗೆ ಮಾರಾಟ ಮಾಡಲಾಗುವುದು.

2) ಬಿಡ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಚಿತವಾಗಿ ರೂ. 10,000/– ಗಳನ್ನು ಡಿಡಿ ಮೂಲಕ ಸಲ್ಲಿಸಿ, ಬಿಡ್‌ನಲ್ಲಿ ಭಾಗವಹಿಸಬಹುದು. ಹರಾಜನ್ನು ಮೊಹರು ಬಂದಾದ /ತೆರೆದ ಲಕೋಟೆ ಪದ್ಧತಿಯಲ್ಲಿ ನಡೆಸಲಾಗುವುದು. ಹೆಚ್ಚಿನ ಬಿಡ್ ನಮೂದಿಸಿದ ಬಿಡ್‌ದಾರರಿಗೆ ಬಿಡ್ ಮೊತ್ತವನ್ನು ಹೆಚ್ಚಿಸಲು ಉಳಿದ ಬಿಡ್‌ದಾರರ ನಡುವೆ ಮುಕ್ತ ಹರಾಜಿನಲ್ಲಿ ಅವಕಾಶ ಕಲ್ಪಿಸಲಾಗುವುದು.

3) ಇ.ಎಂ.ಡಿ. ಹಣವನ್ನು ಡಿ.ಡಿ. ಮತ್ತು ಟೆಂಡರ್ ಲಕೋಟೆಯೊಂದಿಗೆ ದಿನಾಂಕ : 22–12–2021ರ ಮಧ್ಯಾಹ್ನ 1 ಗಂಟೆಯೊಳಗೆ ಯಾವುದೇ ಕೆಲಸದ ದಿನಗಳಂದು ಶಾಖೆಯಲ್ಲಿ ಸಲ್ಲಿಸಬೇಕು.

4) ಯಶಸ್ವಿ ಬಿಡ್‌ದಾರರ ಶೇ 25 ರಷ್ಟು ಮೊತ್ತವನ್ನು ತಕ್ಷಣವೇ ಭರಿಸತಕ್ಕದ್ದು ಮತ್ತು ಬಾಕಿ ಹಣವನ್ನು 7 ದಿನಗಳೊಳಗೆ ಭರಿಸಿ ವಾಹನವನ್ನು ತೆಗೆದುಕೊಂಡು ಹೋಗತಕ್ಕದ್ದು.

5) ಒಂದು ವೇಳೆ ತಿಳಿಸಿದ ಷರತ್ತಿಗೆ ಬಿಡ್‌ದಾರರು ತಪ್ಪಿದಲ್ಲಿ ಈಗಾಗಲೇ ಭರಿಸಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. ಮತ್ತು ವಾಹನದ ಹರಾಜು ಪ್ರಕ್ರಿಯೆಯನ್ನು ಮುಂದುವರಿಸಬಹುದು.

6) ಯಾವುದೇ ಕಾರಣ ನೀಡದೆ ಬಿಡ್‌ನ್ನು ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

7) ಟೆಂಡರ್ ಷರತ್ತಿನಲ್ಲಿ ನಮೂದಿಸಲಾದ ಇನ್ನುಳಿದ ವಿಷಯಗಳನ್ನು ಯಾವುದೇ ಕಾರಣ ನೀಡದೆ ಬದಲಾವಣೆ, ರದ್ದು ಪಡಿಸುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಈ ಷರತ್ತು ಮತ್ತು ನಿಬಂಧನೆಗೊಳಪಡುವ ಎಲ್ಲಾ ವಿಷಯಗಳ ಮೇಲೆ ಬ್ಯಾಂಕ್‌ನ ನಿರ್ಧಾರವೇ ಅಂತಿಮವಾದದ್ದು.

ಸ್ಥಳ : ದಾವಣಗೆರೆ
ದಿನಾಂಕ : 11–12–2021

ಸಹಿ/–
ಶಾಖಾ ವ್ಯವಸ್ಥಾಪಕರು.





**ಹುಟ್ಟುಹಬ್ಬದ ಶುಭಾಶಯಗಳು**

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ

**ಶ್ರೀ ರಾಜನಹಳ್ಳಿ ಶಿವಕುಮಾರ್**

ಅವರಿಗೆ ಜನ್ಮ ದಿನದ ಶುಭಾಶಯಗಳು. ನೂರುಕಾಲ ಭಗವಂತನು ಆಯುಷ್ಯ, ಐಶ್ವರ್ಯ ನೀಡಲಿ ಎಂದು ಪ್ರಾರ್ಥಿಸುತ್ತಾ, ಶ್ರೀಯುತರು ತಮ್ಮ ರಾಜಕೀಯ ಜೀವನದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸುತ್ತೇನೆ.






**ಆರ್. ಹನುಮಂತಪ್ಪ**
ಮಾಲೀಕರು
ಅಣ್ಣ ಬಾಂಡ್ ಫ್ಲವರ್ ಸ್ಟಾಲ್
ಪುಷ್ಪ ಹರಾಜು ಕೇಂದ್ರ,
ಭಾರತ್ ಕಾಲೋನಿ ದಾವಣಗೆರೆ.





**ಜನ್ಮದಿನದ ಶುಭಾಶಯಗಳು**



ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ

**ಶ್ರೀ ರಾಜನಹಳ್ಳಿ ಶಿವಕುಮಾರ್**

ಅವರಿಗೆ ಜನ್ಮ ದಿನದ ಶುಭಾಶಯಗಳು.

ನೂರುಕಾಲ ಭಗವಂತನು ಆಯುಷ್ಯ, ಐಶ್ವರ್ಯ ನೀಡಲಿ ಎಂದು ಪ್ರಾರ್ಥಿಸುತ್ತಾ, ಶ್ರೀಯುತರು ತಮ್ಮ ರಾಜಕೀಯ ಜೀವನದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸುತ್ತೇವೆ.





**ಮಹೇಶ್ ಆಚಾರ್**
ಬಿಲ್ಡರ್ ಅಂಡ್ ಡೆವಲಪರ್ಸ್, ರಾಣೇಬೆನ್ನೂರು

**ಶುಭ ಕೋರುವವರು: ಕಿರಣ್ ಕುಮಾರ್ ಹೆಚ್.ಹೆಚ್. ಮತ್ತು ಸ್ನೇಹಿತರ ಬಳಗ**

